ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2021 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | January 2021 | Monthly**


“ ನಾನು ಇನ್ನು ಉಳಿಯಲಾರೆ. ಕಡೆಯ ಉಸಿರಿನವರೆಗೂ
ಭಾರತದ ಸ್ವಾತಂತ್ರ್ಯಕ್ಕಾಗಿ ನಾನು ಹೋರಾಟ ನಡೆಸಿದ್ದೇನೆ.
ಭಾರತವು ಇಷ್ಟರಲ್ಲೇ ಸ್ವತಂತ್ರ್ಯವಾಗುವುದಾಗಿ
ನನ್ನ ದೇಶ ಬಾಂಧವರಿಗೆ ತಿಳಿಸಿ. ಚಿರಕಾಲ ಬಾಳಲಿ ಸ್ವತಂತ್ರ ಭಾರತ.

ತಾಯಿ ಭಾರತಿಯನ್ನು ದಾಸ್ಯ
ಸಂಕೋಲೆಯಿಂದ ವಿಮುಕ್ತಿಗೊಳಿಸುವುದನ್ನೇ
ಜೀವನದ ಪರಮ ಗುರಿಯನ್ನಾಗಿಸಿಕೊಂಡ
ಹುತಾತ್ಮ ‘ನೇತಾಜಿ’ ಸುಭಾಷ್ ಚಂದ್ರ
ಬೋಸ್ ಅವರ 125 ನೇ ಜನ್ಮದಿನ



## ಪರಾಕ್ರಮ ದಿನ

# ಸಂಪಾದಕೀಯ

## ಗಣರಾಜ್ಯೋತ್ಸವ

ಜನವರಿ 26 ಅಂದರೆ ನಮಗೆಲ್ಲಾ ಗೊತ್ತು ಗಣರಾಜ್ಯೋತ್ಸವದ ದಿನವೆಂದು. ಇಡೀ ದೇಶವೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ, ಉತ್ಸಾಹದಿಂದ ಆಚರಿಸುತ್ತದೆ. ಜನವರಿ 26, 1950 ರಂದು ಸಂವಿಧಾನವು ಜಾರಿಗೆ ಬಂದ ದಿನವನ್ನೇ ನಾವು ನೀವೆಲ್ಲಾ ಗಣರಾಜ್ಯೋತ್ಸವವೆಂದು ಆಚರಿಸುತ್ತೇವೆಂಬುದು ನಮ್ಮ ಜಾಣ ಓದುಗರೆಲ್ಲಗೂ ತಿಳಿದಿರುವ ವಿಷಯವೇ.

ಭಾರತದ ಸಂವಿಧಾನವು ಭಾರತದ ಜನರನ್ನು ಆಳುವ ಸರಕಾರದ ಮೂಲರಚನೆಯನ್ನು ನಿರ್ದಿಷ್ಟಪಡಿಸುತ್ತದೆ. ಈ ಸಂವಿಧಾನವು 9 ಡಿಸೆಂಬರ್ 1947 ರಿಂದ 26 ನವೆಂಬರ್ 1949ರ ಮಧ್ಯ ಭಾರತದ ಸಂವಿಧಾನ ರಚನಾ ಸಭೆಯಿಂದ ರಚನೆಗೊಂಡು 26 ಜನವರಿ 1950 ರಂದು ಜಾರಿಗೆ ಬಂದಿದ್ದು. ಭಾರತದ ಸಂವಿಧಾನ ಇಲ್ಲಿಯವರೆಗಿನ ಮೂಲದ ಪ್ರಕಾರ 395 (ನಂತರ 467) ವಿಧಿಗಳು 22 (ನಂತರ 25) ಭಾಗಗಳಲ್ಲಿಯೂ, 8 (ನಂತರ 12) ಅನುಚ್ಛೇದಗಳನ್ನು 114 ತಿದ್ದುಪಡಿಗಳನ್ನು ಹೊಂದಿರುವ ನಮ್ಮ ಸಂವಿಧಾನ ಯಾವುದೇ ದೇಶದ ಲಿಖಿತ ಸಂವಿಧಾನಕ್ಕಿಂತ ದೀರ್ಘವಾದುದ್ದು.

ಸಂವಿಧಾನವು ದೇಶದ ಜನರನ್ನು ಆಳುವ ಸರಕಾರದ ಮೂಲ ರಚನೆಯನ್ನು ನಿರ್ದಿಷ್ಟಪಡಿಸುತ್ತವೆ. ಅದು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಸರಕಾರದ ಮೂರು ಮುಖ್ಯ ಅಂಗಗಳಾಗಿ ಏರ್ಪಡಿಸುತ್ತದೆ. ಸಂವಿಧಾನವು ಪ್ರತಿ ಅಂಗದ ಅಧಿಕಾರದ ವ್ಯಾಖ್ಯೆಯನ್ನು ನೀಡುವುದಲ್ಲದೆ ಅವುಗಳ ಜವಾಬ್ದಾರಿಯನ್ನೂ ಖಚಿತಗೊಳಿಸುತ್ತದೆ.

ಜನವರಿ 26 ಏಕೆ ಗಣರಾಜ್ಯೋತ್ಸವವೆಂದು ಪ್ರಶ್ನಿಸಿದರೆ ಉತ್ತರವನ್ನು ಹೀಗೆ ಹೇಳಬಹುದು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಬಳಿಕ ಪೂರ್ಣ ಪ್ರಮಾಣದ ಪ್ರಜಾಪ್ರಭುತ್ವ ಜಾರಿಗೆ ಬಂದ ಬಳಿಕವೂ ಭಾರತದ ಆಡಳಿತ ವ್ಯವಸ್ಥೆ ಒಂದು ನೀತಿಗೆ ಒಳಪಟ್ಟಿರಲಿಲ್ಲ. ಅಂದಿನ ಪ್ರಮುಖ ನಾಯಕರಾದ ಮಹಾತ್ಮ ಗಾಂಧಿ, ನೆಹರೂ, ಸುಭಾಷ್‌ಚಂದ್ರಬೋಸ್, ಪಟೇಲ್ ಮೊದಲಾದವರ ಮುಂದಾಳತ್ವದಲ್ಲಿ ಲಾಹೋರಿನ ರಾವಿ ನದಿಯ ತೀರದಲ್ಲಿ ಜನವರಿ 26 ರಂದೆ ಸುಮಾರು 20 ವರ್ಷಗಳ ಹಿಂದೆಯೇ 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದು ಪ್ರತಿಪಾದಿಸಲಾಗಿತ್ತು. ಆ ದಿನವೇ ಮಹಾತ್ಮಾಗಾಂಧೀಜಿಯವರು ತಮ್ಮ ದಂಡಿ ಯಾತ್ರೆಯನ್ನೂ ಆರಂಭಿಸಿದ್ದರು. ಹಾಗಾಗಿ 1950 ರ ಜನವರಿ 26 ಕ್ಕೂ ಮೊದಲೇ ಸಂವಿಧಾನ ಸಿದ್ಧವಾಗಿದ್ದರೂ ಸುಮಾರು ಎರಡು ತಿಂಗಳ ನಂತರ ಜನವರಿ 26 ರಂದೇ ಮಂಡಿಸಲಾಯಿತು.

ಒಂದು ದೇಶವನ್ನು ಮುನ್ನಡೆಸಲು ಲಿಖಿತ ಸಂವಿಧಾನದ ಅವಶ್ಯಕತೆ ಇದ್ದೇ ಇದೆ. ಆದರೆ ನಮ್ಮ ಭಾರತೀಯ ಪರಿವಾರಗಳನ್ನು ಅಥವಾ ಗ್ರಾಮಗಳನ್ನು ನೋಡಿದರೆ ಯಾವುದೇ ಲಿಖಿತ ನಿಯಮಗಳು ಇಲ್ಲದಿದ್ದರೂ, ನಿರಾಯಾಸವಾಗಿ ಕೌಟುಂಬಿಕ, ಸಾಮಾಜಿಕ ಸಾಮರಸ್ಯ ಇದ್ದುದನ್ನು ನಾವು ನೀವೆಲ್ಲಾ ಕೇಳಿರಬಹುದು. ನಮ್ಮಲ್ಲೇ ಅತಿ ಹಿರಿಯರು ಇದರ ಭಾಗವಾಗಿದ್ದು, ನೋಡಿರಲೂಬಹುದು.

ಸಂವಿಧಾನವೆಂದರೆ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ಕಾರ್ಯ ವೈಖರಿಯನ್ನು ತಿಳಿಸುವುದು. ನಮ್ಮ ಭಾರತೀಯ ಪರಿವಾರದ ಹಿರಿಯರೊಬ್ಬರೇ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಕೆಲಸವನ್ನು ನಿರಾಯಾಸವಾಗಿ ನಿರ್ವಹಿಸಿಲ್ಲವೇ? ಅವಿಭಾಜ್ಯ ಕುಟುಂಬಗಳು ಇರುತ್ತಿದ್ದ ಪರಿವಾರದವರ ಸಂಖ್ಯೆಯೇನು ಕಡಿಮೆಯಿರುತ್ತಿರಲಿಲ್ಲ, ಆದರೆ ಮನೆಯ ಹಿರಿಯರೇ ಎಲ್ಲವನ್ನೂ ಚ್ಯುತಿ ಬಾರದಂತೆ ನಿರಾಯಾಸವಾಗಿ ನಿಭಾಯಿಸುತ್ತಿದ್ದರಲ್ಲವೇ? ಹಿಂದೆ ಯಾವುದೇ ಗ್ರಾಮದವರೂ ಏನೇ ವ್ಯಾಜ್ಯಗಳು ಬಂದರೂ ಪಂಚಾಯಿತಿಯಲ್ಲಿ ಪಂಚಮರ ಹತ್ತಿರವೇ ನ್ಯಾಯ ನಿರ್ಣಯ ಮಾಡಿಸಿಕೊಳ್ಳುತ್ತಿರಲಿಲ್ಲವೇ? ಗ್ರಾಮದ ಉದ್ಧಾರ, ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಇನ್ನೂ ಅನೇಕ ಕೆಲಸಗಳನ್ನು ಪಂಚಮರ ನೇತೃತ್ವದಲ್ಲಿ ಮಾಡುತ್ತಿರಲಿಲ್ಲವೇ?

ಭಾರತೀಯ ಪಾರಿವಾರಿಕ, ಸಾಮಾಜಿಕ ನಿಯಮಗಳಲ್ಲವೇ ಎಂತಹ ಸಂವಿಧಾನಗಳಿಗೂ ಬುನಾದಿ. ಮನೆಯ ಸಂವಿಧಾನವೆನಿಸಿಕೊಳ್ಳುತ್ತಿದ್ದ ಹಿರಿಯರನ್ನು, ಗ್ರಾಮಕ್ಕೆ ಸಂವಿಧಾನವೆನಿಸಿಕೊಳ್ಳುತ್ತಿದ್ದ ಪಂಚಮರನ್ನು ಹೇಗೆ ಗೌರವಿಸುತ್ತಿದ್ದೆವೋ ಹಾಗೆಯೇ ರಾಷ್ಟ್ರದ (ಸರಕಾರದ) ಮೂಲ ರಚನೆಯನ್ನು, ಕಾರ್ಯವನ್ನು ನಿರ್ದಿಷ್ಟಪಡಿಸುವ ಸಂವಿಧಾನವನ್ನು ಗೌರವಿಸೋಣ, ಜನವರಿ 26ನ್ನು ಅರ್ಥಪೂರ್ಣ ಗಣರಾಜ್ಯೋತ್ಸವ ವನ್ನಾಗಿ ಆಚರಿಸೋಣ.

-----

ಪ್ರಿಯ ಓದುಗರಿಗೆ ಜನವರಿ 12ರ ಸ್ವಾಮಿ ವಿವೇಕಾನಂದರ ಜನ್ಮದಿನ, ಜನವರಿ 23ರ ಸುಭಾಷ್‌ಚಂದ್ರಬೋಸರ ಜನ್ಮದಿನ ಹಾಗೂ ಜನವರಿ 26ರ ಗಣರಾಜ್ಯೋತ್ಸವದ ಶುಭಾಶಯಗಳು.

ಸಂಪಾದಕ

# ಸೂಕ್ತಿ



ಸೋದರರೇ, ನಾವೆಲ್ಲರೂ ಶ್ರಮವಹಿಸಿ ದುಡಿಯೋಣ. ನಿದ್ರೆಗಿದು ಸಮಯವಲ್ಲ. ನಮ್ಮ ಇಂದಿನ ಕಾರ್ಯದ ಮೇಲೆ ಭಾವೀ ಭಾರತ ನಿಂತಿದೆ. ಏಳಿ, ಎಚ್ಚರಗೊಳ್ಳಿ ; ನಮ್ಮ, ಭಾರತಮಾತೆಯು ಹಿಂದೆಂದಿಗಿಂತ ವೈಭವಯುತಳಾಗಿ, ಶೋಭಾಯಮಾನವಾದ ತನ್ನ ಸಿಂಹಾಸನದ ಮೇಲೆ ವಿರಾಜಿಸುವುದನ್ನು ನೋಡಿ.

- ಸ್ವಾಮಿ ವಿವೇಕಾನಂದ

# ಪರಿವಿಡಿ


- ಆತ್ಮಾಭಿಮಾನದ ಸಂಸತ್ 3
- ನಾವೂ ಹೀಗಾಗಬಹುದೇ? 4
- ಅಸಾಮಾನ್ಯ ನೇತಾರ – ನೇತಾಜಿ 5
- ಭಾರತ ಪರಿಚಯ 7
- ಶ್ರೀರಾಮಮಂದಿರಕ್ಕೆ ಶುಭ ಮುಹೂರ್ತ (ಹಿಂದಿನ ಸಂಚಿಕೆಯಿಂದ) 8
- ಶ್ರೀರಾಮಮಂದಿರ ನಿಧಿ ಸಮರ್ಪಣಾ ಅಭಿಯಾನ 11
- ಸುದ್ದಿಗಳು 12

# ಆತ್ಮಾಭಿಮಾನದ ಸಂಸತ್


**ಡಾ|| ಟಿ. ಎನ್. ಲೋಕೇಶ್**
**ಶಿಕ್ಷಣ ತಜ್ಞರು ಮತ್ತು ಚಿಂತಕರು**



ಡಿಸೆಂಬರ್ 10, 2020 ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನದಂದು ಭಾರತದ ಆದರಣೀಯ ಪ್ರಧಾನಮಂತ್ರಿ ನರೇಂದ್ರ ಮೋದಿ ಹೊಸ ಸಂಸತ್ ಭವನದ ಭೂಮಿ ಪೂಜೆ ಮತ್ತು ಶಿಲಾನ್ಯಾಸ ನೆರವೇರಿಸಿದ್ದಾರೆ. ಪ್ರಸ್ತುತ ಈ ಕಾರ್ಯದ ಬಗ್ಗೆ ದೇಶದಾದ್ಯಂತ ಪರ ಮತ್ತು ವಿರೋಧ ಚರ್ಚೆಗಳು ನಡೆಯುತ್ತಿವೆ. ಆದರೆ ಈ ಕಾರ್ಯದ ಹಿಂದಿನ ಆಶಯವನ್ನು ಪ್ರಜ್ಞಾವಂತ ನಾಗರೀಕರಾದ ನಾವುಗಳು ಸಮರ್ಥಿಸುವುದು ಅತ್ಯಾವಶ್ಯಕವಾಗಿದೆ. ನವ ಸಂಸತ್ ಭವನದ ಭೂಮಿ ಪೂಜೆಯನ್ನು ಕರ್ನಾಟಕದ ಶೃಂಗೇರಿ ಮಠದ ಪುರೋಹಿತರು ನಡೆಸಿಕೊಟ್ಟದ್ದು ಅತ್ಯಂತ ವಿಶೇಷವಾಗಿತ್ತು. ಸರ್ವಧರ್ಮ ಪ್ರಾರ್ಥನೆಯೊಂದಿಗೆ ನಡೆದ ಪೂಜೆ ರಾಷ್ಟ್ರದ ಧರ್ಮಸ್ವೀಕಾರತೆ ಮತ್ತು ಧರ್ಮಸಹಿಷ್ಣುತೆಯ ಶ್ರೇಷ್ಠತೆಯನ್ನು ಅನಾವರಣಗೊಳಿಸುವಂತಿತ್ತು. ಇಡೀ ಜಗತ್ತಿಗೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ನೀಡಿದ, 'ಸರ್ವೆಜನೋ ಸುಖಿನೋ ಭವಂತು', 'ಸರ್ವೇ ಸಂತು ನಿರಾಮಯ', 'ವಸುದೈವ ಕುಟುಂಬಕಮ್' ಎಂಬ ಉದ್ಘೋಷ ಭಾರತವನ್ನು ಪ್ರಜಾಪ್ರಭುತ್ವದ ತಾಯಿ ಎಂಬುದನ್ನು ಮತ್ತೊಮ್ಮೆ ವಿಶ್ವಕ್ಕೆ ಪರಿಚಯಿಸಿದಂತೆ ಕಂಡು ಬಂತು. ಉದಾತ್ತ ವಿಚಾರಧಾರೆ ಎಲ್ಲಾ ದಿಕ್ಕುಗಳಿಂದಲೂ ಹರಿದು ಬರಲಿ ಎಂಬ ಸಂದೇಶ ಇಡೀ ವಿಶ್ವಕ್ಕೆ ಮತ್ತೊಮ್ಮೆ ಮಾರ್ದನಿಸಿತು.

ಪ್ರಧಾನ ಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ 12ನೇ ಶತಮಾನದ ಕಲ್ಯಾಣ ಕ್ರಾಂತಿಯನ್ನು ಉಲ್ಲೇಖ ಮಾಡಿ ಅದರಂತೆ ಹೊಸ ಸಂಸತ್ತು ಜನಕಲ್ಯಾಣದ ಉನ್ನತಿ ಹಾಗೂ ಅಭಿವೃದ್ಧಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತದೆ ಎಂಬುದನ್ನು ಪುನರುಚ್ಚರಿಸಿದರು. ಈಗಿನ ಸಂಸತ್ತು ಸ್ವಾತಂತ್ರ್ಯೋತ್ತರ ಭಾರತಕ್ಕೆ ದಾರಿ ತೋರಿಸಿ ಅಗತ್ಯತೆ ಪೂರೈಸಿದೆ. ಆದರೆ ಹೊಸ ಸಂಸತ್ತು 21 ನೇ ಶತಮಾನದ ಭಾರತದ ಆಶೋತ್ತರಗಳನ್ನು ಈಡೇರಿಸಿ ಆತ್ಮನಿರ್ಭರ ಭಾರತಕ್ಕೆ ಸಾಕ್ಷಿಯಾಗಲಿದೆ.

ಪ್ರಜಾಪ್ರಭುತ್ವ ಇತರೇ ದೇಶಗಳಲ್ಲಿ ಕೇವಲ ಸರ್ಕಾರ ಮತ್ತು ಚುನಾವಣೆಗೆ ಸೀಮಿತವಾಗಿದೆ. ಆದರೆ ಭಾರತದಲ್ಲಿ ಪ್ರಜಾಪ್ರಭುತ್ವ ಎಂದರೆ ಮೌಲ್ಯ, ಉತ್ಕೃಷ್ಟ ಜೀವನಶೈಲಿ ಹಾಗೂ ರಾಷ್ಟ್ರದ ಆತ್ಮದಂತಿದೆ. ಜಾಗತೀಕ ಮಟ್ಟದಲ್ಲಿ 'ಭಾರತ–ಪ್ರಜಾಪ್ರಭುತ್ವದ ತಾಯಿ' ಎಂದು ಕರೆಸಿಕೊಳ್ಳುವ ದಿನಗಳು ದೂರವಿಲ್ಲ ಎಂಬುದು ಸರ್ವವಿಧಿತ ಎಂದೆನಿಸಿದೆ. ಹೊಸ ಸಂಸತ್ ಭವನ 'ಶ್ರೀಸಾಮಾನ್ಯನ ಸಂಸತ್', ದೇಶೀ ಸಿದ್ಧಾಂತದ ಆಧಾರದಲ್ಲಿ ನಿರ್ಮಾಣ, ಜೊತೆಗೆ ಭಾರತೀಯ ಸಾಂಸ್ಕೃತಿಕ ವೈವಿಧ್ಯತೆ, ಪ್ರಾದೇಶಿಕ ಕಲೆ, ಕರಕುಶಲತೆಯನ್ನು ಮೇಳೈಸಿಕೊಂಡು ಸ್ವದೇಶಿ ಪ್ರಜ್ಞೆಯೊಂದಿಗೆ ಎರಡು ಸಾವಿರ ಜನ ನೇರವಾಗಿ ಹಾಗೂ ಒಂಭತ್ತು ಸಾವಿರ ಜನ ಪರೋಕ್ಷವಾಗಿ ರಚನಾ ಕಾರ್ಯದಲ್ಲಿ ಭಾಗವಹಿಸುವುದರ ಮೂಲಕ ದೇಶಿಯ ಸೊಗಡಿನ ಭಾರತ ಸಂಸತ್ ನಿರ್ಮಾಣದಲ್ಲಿ ಹೆಮ್ಮೆಯಿಂದ ಪಾಲ್ಗೊಳ್ಳುತ್ತಿರುವುದು ಆತ್ಮನಿರ್ಭರ ಭಾರತದ 'ಆತ್ಮ'ವನ್ನು ಜಾಗೃತಗೊಳಿಸಿದಂತೆ ಎಂಬುದು ನಿರ್ವಿವಾದ. ಪ್ರಸ್ತುತ ಸಂಸತ್ತಿನ ವಿನ್ಯಾಸದ ರೂಪುರೇಷೆಯನ್ನು 1912–13 ರಲ್ಲಿ ಬ್ರಿಟೀಷ್ ತಂತ್ರಜ್ಞಾರಾದ ಎಡ್ವಿನ್ ಲ್ಯೂಟೆನ್ಸ್ ಮತ್ತು ಹರ್ಬರ್ಟ್ ಬೇಕರ್‌ರವರು ನಿರ್ಮಿಸಿದ್ದರು. ಫೆಬ್ರವರಿ–12,1921 ರಲ್ಲಿ ಡ್ಯೂಕ್ ಆಫ್ ಕೋನಾಟ್‌ನ ನೇತೃತ್ವದಲ್ಲಿ ಪ್ರಾರಂಭವಾದ ಕಟ್ಟಡದ ನಿರ್ಮಾಣ ಕಾರ್ಯ ಜನವರಿ 18,1927ರಲ್ಲಿ ಪೂರ್ಣಗೊಂಡಿತ್ತು. ನಿರ್ಮಾಣದ ವೆಚ್ಚ 83 ಲಕ್ಷಗಳಾಗಿತ್ತು. ಅಂದಿನ



ಬ್ರಿಟೀಷ್ ಭಾರತದ ಗೌವರ್ನರ್ ಜನರಲ್ ಲಾರ್ಡ್ ಇರ್ವಿನ್ ಸಂಸತ್ ಭವನವನ್ನು ಉದ್ಘಾಟಿಸಿದ್ದರು.

ಪ್ರಸ್ತುತ ಸಂಸತ್ ಭವನವನ್ನು ಬ್ರಿಟೀಷರೇ ನಿರ್ಮಿಸಿದ್ದರು ಸಹಿತ ಇದೊಂದು ವಿಶ್ವದ ಅದ್ಭುತ ಕಟ್ಟಡಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಭವ್ಯ ಭವನವನ್ನು ನಿರ್ಮಿಸಲು ಬ್ರಿಟೀಷರಿಗೆ ಸ್ಫೂರ್ತಿಯನ್ನು ನೀಡಿದ್ದು ಭಾರತೀಯ ಸಂಸ್ಕೃತಿಯ ಪ್ರತೀಕದಂತಿದ್ದ ಮಧ್ಯಪ್ರದೇಶದ ಚೌಸತ್‌ಯೋಗಿನಿ ಮಹಾದೇವನ ಮಂದಿರವೆಂದರೆ ಉತ್ಪ್ರೇಕ್ಷೆಯಲ್ಲ. ಅಂದು ಭಾರತೀಯರು ಬ್ರಿಟೀಷರ ದಾಸ್ಯದಲ್ಲಿದ್ದರೂ, ಭಾರತೀಯ ಸಂಸ್ಕೃತಿಗೆ ದಾಸ್ಯದ ಸೋಂಕು ಲವಲೇಷವು ಅಂಟಿರಲಿಲ್ಲ ಎಂಬುದು ನಿರ್ವಿವಾದ. ಇದೇ ಭಾರತದ ಸನಾತನ ಸಂಸ್ಕೃತಿಯ ಹಿರಿಮೆ– ಗರಿಮೆಯಾಗಿದೆ. ಸಾಂಚಿಯ ಭೌದ್ಧ ಸ್ತೂಪ, ಅಶೋಕ ಚಕ್ರದಿಂದ ಪ್ರಭಾವಿಸಲ್ಪಟ್ಟು ಗೋಲಾಕಾರದಲ್ಲಿ ಹಿಂದೂಧರ್ಮದ ಕುರುಹು ಎಂಬಂತೆ ನಿರ್ಮಾಣವಾಗಿದೆ. ಈಗಿನ ಸಂಸತ್ 94 ವರ್ಷದ ಭಾರತದ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಿ ತನ್ನೊಡಲಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಐತಿಹಾಸಿಕ ಘಟನೆಗಳ ಅನಾವರಣಕ್ಕೆ ಜೀವಂತ ಸಾಕ್ಷಿಯೆಂಬ ಹೆಗ್ಗಳಿಕೆ ಸಂಸತ್‌ಗೆ ಸಲ್ಲುತ್ತದೆ. ಬ್ರಿಟೀಷ್ ಆಡಳಿತ ಅಂತ್ಯಗೊಂಡ ನಂತರ ಸಂಸತ್ ಭಾರತದ ಸಂವಿಧಾನ ರಚನಾ ಸಭೆಯ ಸುಪರ್ದಿಗೆ ಬಂದಿತ್ತು.

ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಹಲವಾರು ಕಾರಣಗಳಿಂದ ಪರ್ಯಾಯ ಭವನದ ಪ್ರಸ್ತಾಪವನ್ನು ಸಲ್ಲಿಸಲಾಗಿತ್ತು. ಆದರೆ ಅದು ಆಗ ಕೈಗೂಡಿರಲಿಲ್ಲ. ಈಗ ಆತ್ಮನಿರ್ಭರ ಸಂಸತ್ ನಿರ್ಮಾಣದ ಕಾಲ ಕೂಡಿ ಬಂದಿದೆ. ಈಗಿನ ಸಂಸತ್‌ನಲ್ಲಿ ಜಾಗದ ಅಭಾವ, ಕಟ್ಟಡದ ಶಿಥಿಲೀಕರಣ, ಪುನರ್ ಕಟ್ಟಡಕ್ಕೆ ಅವಕಾಶ ಇಲ್ಲದೆ ಇರುವುದು ಹಾಗೂ ರಿಪೇರಿಗೆ ವಾರ್ಷಿಕ ಸಾವಿರ ಕೋಟಿಗಳಷ್ಟು ಹಣದ ಅವಶ್ಯಕತೆ ಇರುವುದು ಅಷ್ಟೇ ವಾಸ್ತವಿಕವಾಗಿದೆ.

ಪುಟ 10 ಕ್ಕೆ ➤

**ಶಿಕ್ಷಕ ಸ್ತಂಭ**

# ನಾವೂ ಹೀಗಾಗಬಹುದೇ?



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

ಭಾರತೀಯ ಸಂಸ್ಕೃತಿಯಲ್ಲಿ 'ಗುರು'ವಿಗೆ ತುಂಬ ಮಹತ್ತ್ವದ, ಪವಿತ್ರವಾದ ಸ್ಥಾನವಿದೆ. ಗುರುವೆಂದರೆ ಸಾಕ್ಷಾತ್ ತ್ರಿಮೂರ್ತಿಗಳ ಪ್ರತ್ಯಕ್ಷ ರೂಪವೆಂದು ಉನ್ನತ ಸ್ಥಾನವನ್ನು ನೀಡಲಾಗಿದೆ. ವ್ಯಕ್ತಿತ್ವನಿರ್ಮಾಣ, ಅರ್ಥಪೂರ್ಣ, ಸಾರ್ಥಕ ಜೀವನ ನಡೆಸಲು ಮಾರ್ಗದರ್ಶನ, ಅದಕ್ಕೆ ಅಗತ್ಯವಾದ ಅರಿವು, ದುಷ್ಪಗುಣಗಳ ಪರಿಹಾರೋಪಾಯ ಎಲ್ಲವನ್ನೂ ಮಾಡುತ್ತ ಕೈಹಿಡಿದು ನಡೆಸುವ ಶಕ್ತಿಯೇ 'ಗುರು'. ಅದಕ್ಕೇ 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು' ಎಂದೇ ಪ್ರಾರ್ಥನೆ ಮಾಡುತ್ತೇವೆ. ಇಂತಹ ಗುರು ತಾಯಿಯ ಮಮತೆ, ವಾತ್ಸಲ್ಯ, ತಂದೆಯ ಜವಾಬ್ದಾರಿ, ಪಾಲನೆ, ಪೋಷಣೆಗಳ ಸಮಸ್ತ ಹೊಣೆಗಾರಿಕೆ ಎಲ್ಲವನ್ನೂ ನಿರ್ವಹಿಸುತ್ತಾನೆ. ಇಷ್ಟೆಲ್ಲ ಮಾಡಿದರೂ ಶಿಷ್ಯನಾದವನು ತನ್ನನ್ನೂ ಮೀರಿ ಬೆಳೆದಾಗ ಮನದುಂಬಿ ಆಶೀರ್ವದಿಸುತ್ತಾನೆ, ಇದಕ್ಕೆ ಬೇಕು ಹೃದಯ ಶ್ರೀಮಂತಿಕೆ, ಆಗಲೇ ಅವನ 'ಗುರು' ಪದವಿ ಅನ್ವರ್ಥವೆನಿಸುವುದು.

50–60–70ರ ದಶಕಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಂತೆಯೇ ಕರ್ನಾಟಕ ವಿಶ್ವವಿದ್ಯಾಲಯ ಕೂಡ ಅತ್ಯಂತ ಶ್ರೇಷ್ಠವೆನಿಸಿದ ಗುರುವೃಂದವನ್ನು ಹೊಂದಿತ್ತು. ಅಂತಹವರಲ್ಲಿ ಒಬ್ಬರು ಡಾ॥ ಆರ್.ಸಿ.ಹಿರೇಮಠ. ಕಾಲೇಜು ಅಧ್ಯಾಪಕರಾಗಿ, ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಅಧ್ಯಯನಪೀಠದ ನಿರ್ದೇಶಕರಾಗಿ ವಿಭಾಗವನ್ನು ತ್ರಿವಿಕ್ರಮನಂತೆ ಬೆಳೆಸಿ ನಂತರ ವಿಶ್ವವಿದ್ಯಾಲಯದ ಉಪಕುಲಪತಿಯಾದ ಸಾಹಸಿ. ಸಾಹಿತ್ಯ ಕೃಷಿಯಲ್ಲಿ ಗ್ರಂಥಸಂಪಾದನೆ, ಭಾಷಾಶಾಸ್ತ್ರ, ಸಂಶೋಧನೆ ಇವರ ಕಾರ್ಯಕ್ಷೇತ್ರಗಳು.

ಅಧ್ಯಾಪನದಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಗುರುವಾಗಿದ್ದವರು ಡಾ॥ಆರ್.ಸಿ.ಹಿರೇಮಠ. ಅವರ ಹೃದಯವೈಶಾಲ್ಯವನ್ನು ಪರಿಚಯಿಸಿದ ಒಂದು ನಿದರ್ಶನವಿದು.

ಕನ್ನಡ ಎಂ.ಎ. ತರಗತಿಗೆ ಅವರು ಭಾಷಾಶಾಸ್ತ್ರದ ಜೊತೆಗೆ ಕಾವ್ಯದ ಭಾಗವನ್ನೂ ಬೋಧಿಸುತ್ತಿದ್ದರು. ಒಮ್ಮೆ 'ವಿಕ್ರಮಾರ್ಜುನವಿಜಯ' (ಆದಿಕವಿ ಪಂಪನದು) ಪಾಠ ಮಾಡುತ್ತಿದ್ದರು. ಕರ್ಣನ ಅವಸಾನವಾಗಿದ್ದ ಸಂದರ್ಭ. ದುರ್ಯೋಧನ ದುಃಖತಪ್ತನಾಗಿದ್ದಾನೆ. ಅವರಿಬ್ಬರಲ್ಲಿದ್ದ ಸ್ನೇಹದ ಗಾಢತೆಯನ್ನು ವಿವರಿಸುತ್ತಿದ್ದರು. ಕೃಪಾಚಾರ್ಯರಿಂದ ಸಂಧಿಯ ಸಲಹೆ ಬಂದಾಗ ದುರ್ಯೋಧನ 'ಕರ್ಣನನ್ನು ಬದುಕಿಸಿ ನನ್ನ ಮುಂದೆ ನಿಲ್ಲಿಸಿದರೆ ನಾನು ಸಂಧಿಗೆ ಒಪ್ಪುತ್ತೇನೆ' ಎನ್ನುತ್ತಾನೆ. ಆಗ ಅಶ್ವತ್ಥಾಮ ಕೋಪೋನ್ಮತ್ತನಾಗಿ ಕರ್ಣನನ್ನು ಹೀಯಾಳಿಸಿ ಮಾತನಾಡುತ್ತಾನೆ. ಅದನ್ನು ಸಹಿಸದೆ ದುರ್ಯೋಧನ "ನಿನ್ನಿಂದ ಈ ತ್ರಿಭುವನ ಸಾಮ್ರಾಜ್ಯವೇ ನನಗೆ ದೊರೆತರೂ ಬೇಡವೆನ್ನುತ್ತೇನೆ. ಕರ್ಣನನ್ನು ಕುರಿತು ಹೀನನುಡಿಗಳನ್ನು ನೀನು ಆಡಿದ್ದರಿಂದ ಬದುಕಿದೆ, ಇನ್ನಾರಾದರೂ ನನ್ನ ಕರ್ಣನ ಬಗ್ಗೆ ಹೀಗೆ ಆಡಿ ಬದುಕುತ್ತಿದ್ದರೇ?" ಎಂದು ನುಡಿಯುತ್ತಾನೆ.

ಈ ಪದ್ಯವನ್ನು ಡಾ॥ ಆರ್.ಸಿ.ಹಿರೇಮಠರು ವಿವರಿಸುತ್ತಾ "ಅಶ್ವತ್ಥಾಮ ಬ್ರಾಹ್ಮಣ, ಮಾತನಾಡಿ ಬದುಕುವವನೇ ಹೊರತು, ಕರ್ಣನಂತೆ ಪರಾಕ್ರಮಿಯಾಗಿ ಇರಿಯಲಾರ. ಅವನು ಬ್ರಾಹ್ಮಣನಾದುದರಿಂದ ದುರ್ಯೋಧನ ಅವನನ್ನು ಕೊಲ್ಲದೆ ಬಿಡುವನು" ಎಂದು ಅರ್ಥೈಸಿದರು. ಈ ವಿವರಣೆ ಅವರ ಶಿಷ್ಯರಲ್ಲಿ ಒಬ್ಬರಾಗಿದ್ದ ರಾಚಪ್ಪ (ಮುಂದೆ ಪ್ರೊಫೆಸರ್ ಆದವರು) ಎಂಬುವವರಿಗೆ ಸರಿಯಿಲ್ಲವೆನಿಸಿತು. ಆದರೆ ತರಗತಿಯಲ್ಲಿ ಅವರ ಎದುರಿಗೆ ವಾದಕ್ಕಿಳಿಯುವುದು ಬೇಡವೆಂದುಕೊಂಡು ತರಗತಿ ಮುಗಿಸಿ ನಂತರ ಅವರ ಕೊಠಡಿಗೆ ಹೋಗಿ ವಿವರಣೆಯ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. 'ನಿಮ್ಮ ಅರ್ಥವನ್ನು ಹೇಳಿ' ಎಂದರು ಪ್ರೊಫೆಸರ್. ರಾಚಪ್ಪ "ಕರ್ಣ ಪರಾಕ್ರಮಿ, ನಿಜ. ಅಶ್ವತ್ಥಾಮನೂ ಪರಾಕ್ರಮಿ, ಕರ್ಣನ ಪರಾಕ್ರಮವನ್ನು ಕಣ್ಣಾರೆ ಕಂಡಿದ್ದ ದುರ್ಯೋಧನನಿಗೆ ಕರ್ಣನಿಲ್ಲದಾಗ ಅವನ ಬಗ್ಗೆ ಹೀಯಾಳಿಸಿದಾಗ ಅಶ್ವತ್ಥಾಮನನ್ನು ಕೊಂದು ಬಿಡುವಷ್ಟು ಕೋಪಬಂದಿತ್ತು. ಆದರೆ, ಆತ ಗುರುಪುತ್ರ, ಮಿತ್ರನೂ ಹೌದು, ಮೇಲಾಗಿ ಬ್ರಾಹ್ಮಣ, ಕರ್ಣನನ್ನು ಅವನು ಹೀಯಾಳಿಸಿದನೆಂದು ಇಂದು ಕೊಲ್ಲುವಂತಿಲ್ಲ. ಕಾರಣ ಬ್ರಹ್ಮಹತ್ಯಾದೋಷ; ಮಿತ್ರಹತ್ಯಾದೋಷ, ಗುರುಪುತ್ರ ಹತ್ಯಾದೋಷಗಳಲ್ಲದೆ ಅಪಕೀರ್ತಿ ಬರುವುದೆಂದು ದುರ್ಯೋಧನ ಈ ಮಾತನ್ನು ಹೇಳಿದ್ದಾನೆ. "ನೀನ್ನುಡಿದು ಬದುರ್ಕಿದೈ...ಪರರ್ ಬದುಕುವರೆ" ಎಂಬಲ್ಲಿ 'ಧ್ವನಿ'ಇದೆ. ಇದು ಪಂಪನ ವೈಶಿಷ್ಟ್ಯ. ನನಗೆ ಹೀಗೆ ಅನಿಸುತ್ತದೆ. ತಪ್ಪಾದರೆ ನಿಮ್ಮಲ್ಲಿ ಹೇಳಿ ತಿದ್ದಿಕೊಳ್ಳೋಣವೆಂದು ಬಂದೆ" ಎಂದು ಹೇಳಿ ಸುಮ್ಮನಾದರು. ಆರ್.ಸಿ.ಅವರು ಏನೂ ಹೇಳಲಿಲ್ಲ. "ಬನ್ನಿ, ವೇಳೆ ಆಗಿದೆ, ಮನೆಗೆ ಹೋಗಿ ಕುಳಿತು ಚರ್ಚೆಮಾಡೋಣ." ಎಂದು ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಚಹಾ ಕುಡಿಯುತ್ತಾ "ನೀವು ಹೇಳಿದ ಅರ್ಥ ಸರಿ. ನಾನು ಹಾಗೆ ಏಕೆ ಹೇಳಿದೆನೋ ತಿಳಿಯದು. ನೀವು ಸರಿಯಾಗಿ ಅರ್ಥ ಮಾಡಿದ್ದೀರಿ. ನಿಮ್ಮ ಅರ್ಥ ಸಮಂಜಸ" ಎಂದರು. "ಇಷ್ಟೊಂದು ವಿವರವಾಗಿ ಪಂಪನನ್ನು ಹೇಗೆ ಅಧ್ಯಯನ ಮಾಡಿದಿರಿ?" ಎಂದು ವಿಚಾರಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಮಾರನೇ ದಿನ ಷಡಕ್ಷರಿ ಮಹಾಕವಿಯ ಪಾಠವಿತ್ತು. ತರಗತಿಗೆ ಬಂದ ಆರ್.ಸಿ.ಅವರು ಪಾಠ ಆರಂಭ ಮಾಡುವ ಮುನ್ನ, ಹಿಂದಿನ ದಿನ ಅವರ ಮತ್ತು ರಾಚಪ್ಪನವರ ನಡುವೆ ನಡೆದಿದ್ದ ವಿಚಾರ ವಿಮರ್ಶೆಯನ್ನು ಹೇಳಿ 'ನೆನ್ನೆ ನಾನು ಹೇಳಿದ ಅರ್ಥ ಸರಿಯಿಲ್ಲ. ರಾಚಪ್ಪ ಅದನ್ನು ಸರಿಯಾಗಿ ಅರ್ಥೈಸಿದ್ದಾರೆ "I am really proud of his knowledge about Pampa"ಎಂದು ಹೇಳಿದರು. ಅವರ ಹೃದಯಶ್ರೀಮಂತಿಕೆಯ ಎದುರು ವಿದ್ಯಾರ್ಥಿಗಳು ತಲೆಬಾಗಿ ನಮಿಸಿದ್ದರು. ಶಿಷ್ಯನೊಬ್ಬನ ವಿಚಾರಲಹರಿಯನ್ನು ಅದು ತಮ್ಮ ಹೇಳಿಕೆಗಿಂತ ಭಿನ್ನವಾಗಿದ್ದರೂ ಅಲ್ಲಿನ ಸತ್ಯಾಂಶವನ್ನು ಗುರುತಿಸಿ ಅತ್ಯಂತ ಅಭಿಮಾನದಿಂದ ಮೆಚ್ಚಿದ ಆ ಗುರುವರ್ಯರ ವಿದ್ವತ್ತು, ವಿನಯ, ಪರರ ವಿಚಾರವನ್ನು ಗೌರವಿಸುವ ಸಹೃದಯತೆ ಚಿನ್ನದಂತಹ ಗುಣ.

ಇಂದು, ತಾವು ಬರೆಸಿದ ನೋಟ್ಸ್‌ನ ಒಂದೆರಡು ಶಬ್ದಗಳು ಯಥಾವತ್ ಬರೆಯದೇ ಉತ್ತರದಲ್ಲಿ ಅಲ್ಪಸ್ವಲ್ಪ ಬದಲಿಸಿದರೂ ಅಂಕಗಳಲ್ಲಿ ಹಿಡಿತ ಮಾಡುವ ಶಿಕ್ಷಕರಿದ್ದಾರೆ. ಕಣ್ಣು ಕೆಂಪಾಗಿಸಿಕೊಳ್ಳುವ ಅದೆಷ್ಟೋ ಶಿಕ್ಷಕರಿದ್ದಾರೆ. ಆದರೂ ಈ 'ಗುರು'ವಿನಂತಾಗಬಹುದೇ?

ತಾವು ಗುರುವಿನ ಸ್ಥಾನದಲ್ಲಿದ್ದೇವೆ. ತಾವು ಹೇಳಿದ್ದೇ ಸರಿ, ತಮಗೆಲ್ಲಾ ಗೊತ್ತು ಎಂಬ 'ಅಹಂ' ಇರುವುದೇ ಇದಕ್ಕೆ ಕಾರಣ. "A Teacher is always a student" ಎಂಬ ಮಾತಿದೆ. "ವಿದ್ಯೆಗೆ ವಿನಯವೇ ಭೂಷಣ" ಎಂಬ ಲೋಕೋಕ್ತಿಯಿದೆ. ಇಂತಹವರೇ ಆದರ್ಶ ಶಿಕ್ಷಕರೆನಿಸುವವರು. ಇವರೇ 'ಗುರು' ಪದವಿಗೆ ಅರ್ಹರಾದವರು.

**ಇಂತಹವರು ಡಾ॥ ಆರ್.ಸಿ.**

**ನಾವೂ ಹೀಗಾಗಬಹುದೇ?**

●

ಎಲ್ಲಿಯವರೆಗೆ ನಿನ್ನಲ್ಲಿ ಶ್ರದ್ಧೆ, ಭಕ್ತಿ, ಸತ್ಯನಿಷ್ಠೆ ಇವೆಯೋ ಅಲ್ಲಿಯವರೆಗೂ ಪ್ರತಿಯೊಂದೂ ಅಭಿವೃದ್ಧಿಗೊಳ್ಳುವುದು. – ಸ್ವಾಮಿ ವಿವೇಕಾನಂದ

# ಅಸಾಮಾನ್ಯ ನೇತಾರ – ನೇತಾಜಿ






**ಶ್ರೀಮತಿ ಸುನೀತ ಗಂಗಾಧರ್**
ರಾಮನಗರ


ಭಾರತದ ಸ್ವಾತಂತ್ರ್ಯ ಹೋರಾಟದ ಯಜ್ಞಕ್ಕೆ ಅಸಂಖ್ಯಾತ ಭಾರತೀಯರು ಸವಿತ್ತುಗಳಾಗಿ ತಮ್ಮನ್ನೇ ಅರ್ಪಿಸಿಕೊಂಡಿದ್ದಾರೆ. ತಾಯಿ ಭಾರತಿಯನ್ನು ದಾಸ್ಯ ಸಂಕೋಲೆಯಿಂದ ವಿಮುಕ್ತಿಗೊಳಿಸುವುದನ್ನೇ ಜೀವನದ ಪರಮ ಗುರಿಯನ್ನಾಗಿಸಿಕೊಂಡ ಹುತಾತ್ಮರಲ್ಲಿ 'ನೇತಾಜಿ' ಸುಭಾಷ್ ಚಂದ್ರ ಭೋಸರು ಅಗ್ರಗಣ್ಯರೆನಿಸಿಕೊಂಡವರು.

ಸ್ವಾತಂತ್ರ್ಯಾ ನಂತರ ಹರಿದು ಹಂಚಿಹೋಗಿದ್ದ ಭಾರತವನ್ನು ಒಗ್ಗೂಡಿಸಿ ಅಖಂಡ ರಾಷ್ಟ್ರವನ್ನಾಗಿಸಿ ಉಕ್ಕಿನ ಮನುಷ್ಯನೆನಿಸಿಕೊಂಡವರು 'ಸರ್ದಾರ್ ಜೀ'. ಭಾರತದ ಸಂಕಷ್ಟಮಯ ಪರಿಸ್ಥಿತಿಯಲ್ಲಿ ಸುಪ್ತವಾಗಿದ್ದ ರಾಷ್ಟ್ರೀಯತೆಯ ಭಾವವನ್ನು ಉದ್ದೀಪ್ತಗೊಳಿಸಿ ದೇಶದ ಒಳ ಹಾಗೂ ಹೊರಗಿನ ಭಾರತೀಯರೆಲ್ಲರನ್ನು ಒಗ್ಗೂಡಿಸಿ ಶಕ್ತಿಯನ್ನಾಗಿಸಿದರು. ವಿದೇಶಿ ರಾಷ್ಟ್ರಗಳೂ ಸಹ ಇವರ ಮುಖಂಡತ್ವದಲ್ಲಿ ಭಾರತೀಯರ ಸ್ವಾಯತ್ತತೆಯನ್ನು ಒಪ್ಪಿ 'ನೇತಾಜಿ' ಎಂದು ಕರೆಸಿಕೊಂಡವರು ಸುಭಾಷರು.

ಎಣಿಸಲಸದಳ ಜನರು ತಮ್ಮ ಜೀವನ ಹಾಗು ಜೀವನವನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗಮಾಡಿದ್ದು, ನವ ಪೀಳಿಗೆಗೆ ಅಂತಹ ಹುತಾತ್ಮರುಗಳ ಚರಿತ್ರೆಯನ್ನಾದರೂ ನೆನಪಿಸಬೇಕಾದದ್ದು ನಮೆಲ್ಲರ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಪ್ರಧಾನಿಯವರ ನೇತೃತ್ವದಲ್ಲಿ 85 ಜನ ಗಣ್ಯರ ತಂಡ ರಚಿಸಿ ಆ ಮೂಲಕ 2022ಕ್ಕೆ ಸುಭಾಷ್ ಚಂದ್ರರ 125ನೇ ಜಯಂತ್ಯೋತ್ಸವದಂದು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮರಾದವರಿಗೆ ಸಲ್ಲಬೇಕಾದ ಗೌರವ ಸಮರ್ಪಣೆಯನ್ನು ಮಾಡಲಿದ್ದಾರೆ.

1897, ಜನವರಿ 23 ನೇತಾಜಿಯವರ ಜನ್ಮದಿನವಾಗಿದ್ದು, ಆ ನೆನಪಿನಂಗವಾಗಿ ಅವರ ಜೀವನದ ಒಂದೆರಡು ಘಟನೆಗಳನ್ನು ಮೆಲುಕು ಹಾಕುತ್ತ ಈ ಕಿರುಬರಹ ತಮ್ಮ ಮುಂದೆ ...

ಸುಭಾಷರು ಒರಿಸ್ಸಾದ ರಾಜಧಾನಿ ಕಟಕ್‌ನಲ್ಲಿ ಜಾನಕೀನಾಥ್ ಭೋಸ್ ಹಾಗೂ ಸಾಧ್ವಿ ಪ್ರಭಾವತಿ ದೇವಿಯವರ ಹದಿನಾಲ್ಕನೇ ಮಗನಾಗಿ ಜನ್ಮಿಸಿದರು. ಕಡು ಬಡತನದ ಸಂಘರ್ಷಮಯ ಜೀವನದಲ್ಲಿ ಸೆಣಸಿ ಖ್ಯಾತ ವಕೀಲ ಪದವಿಗೇರಿದ್ದ ಜಾನಕೀನಾಥರ ಛಲ, ಹೋರಾಟದ ಸ್ವಭಾವವೂ ತಾಯಿಯ ಆಧ್ಯಾತ್ಮಿಕ ಆಸಕ್ತಿ ಚಿಂತನೆ, ವೈರಾಗ್ಯ ವಿರಕ್ತ ಭಾವಗಳೆಲ್ಲಾ ಸುಭಾಷರಿಗೆ ರಕ್ತಗತವಾಗಿಯೆ ಹರಿದು ಬಂದಿದ್ದವು. ಅವರ ಸಂಪೂರ್ಣ ಜೀವನ ಗಮನಿಸಿದರೆ ಈ ಎರಡೂ ಗುಣ–ಧರ್ಮಗಳ ಪ್ರಭಾವಳಿ ದಟ್ಟವಾಗಿ ಮೇಳೈಸಿದ್ದನ್ನು ಕಾಣಬಹುದು.

ಸುಭಾಷರ ಪ್ರಾರಂಭಿಕ ವಿದ್ಯಾಭ್ಯಾಸಗಳೆಲ್ಲ ಕೋಲ್ಕತ್ತೆಯ ಐರೋಪ್ಯಶಾಲೆಯಲ್ಲಿ ನಡೆದವು. ಬಾಲ್ಯದಲ್ಲಿ ಶಾಲೆಗೆ ಭೇಟಿ ನೀಡಿದ್ದ ಅರವಿಂದರ ನುಡಿಗಳು ಅವರ ಜೀವನಕ್ಕೆ ಮುಖ್ಯ ಧ್ಯೇಯವನ್ನೇ ಒದಗಿಸಿದ್ದು ಸುಳ್ಳಲ್ಲಾ. "ನಿಮ್ಮಲ್ಲಿ ಹಲವರಾದರು ದೊಡ್ಡವರಾಗಿ ನಿಮ್ಮ ಸ್ವಂತಕ್ಕಾಗಿ ಅಲ್ಲಾ, ದೇಶವನ್ನ ದೊಡ್ಡದನ್ನಾಗಿ ಮಾಡಲು ದೊಡ್ಡವರಾಗಿ" ಎಂಬ ಅರವಿಂದರ ನುಡಿಯೇ ಸುಭಾಷರ ಜೀವನದ ನಡೆಯಾಯ್ತು.

ಹೈಸ್ಕೂಲು ಶಿಕ್ಷಣ ಪೂರೈಸಿ ಕಾಲೇಜಿನ ವ್ಯಾಸಂಗಕ್ಕೆ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದ ಸುಭಾಷರಿಗೆ ಇಲ್ಲಿ ನಡೆದ ಘಟನಾವಳಿಗಳು ಮುಂದೆ ಸ್ವತಂತ್ರ್ಯ ಹೋರಾಟದ ಹಾದಿಯಲ್ಲಿ ನಡೆದಾಗ ಮಾರ್ಗಸೂಚಿಯಾದವು.

ಕಾಲೇಜಿನಲ್ಲಿ ತಮ್ಮ ಉತ್ತಮ ನಡವಳಿಕೆ ಹಾಗೂ ಮೇಧಾಶಕ್ತಿಯಿಂದ ವಿದ್ಯಾರ್ಥಿಗಳೆಲ್ಲರ ಪ್ರೀತಿಪಾತ್ರರಾಗಿ ಅವರ ಮುಖಂಡರು ಆದರು. ವಿದ್ಯಾರ್ಥಿಗಳ ಸಂಘ ಸ್ಥಾಪಿಸಿ ಚರ್ಚಾಕೂಟಗಳನ್ನು ಏರ್ಪಡಿಸಿದರು. ವಿದ್ಯಾರ್ಥಿ ತಂಡ ಕಟ್ಟಿ ಸಮಾಜ ಸೇವಾ ಕೈಂಕರ್ಯ ಕೈಗೊಂಡರು. ಬಡವರಿಗೋಸ್ಕರ ಮನೆ–ಮನೆಗೂ ತೆರಳಿ ಅಕ್ಕಿ ಧಾನ್ಯಸಂಗ್ರಹಣೆ ಜೊತೆಗೆ ಆ ಕಾಲದಲ್ಲಿ ತೀವ್ರತರವಾಗಿ ಹರಡಿದ್ದ ಕಾಲರಾ ಜಾಡ್ಯದ ಕುರಿತಾಗಿ, ಮಾಹಿತಿ ಹಾಗೂ ಚಿಕಿತ್ಸೆ ಕುರಿತಾಗಿ ಜನರಲ್ಲಿ ಹರಡಿದ್ದ ಮೌಢ್ಯವನ್ನು ಪರಿಹರಿಸಲು ಹಳ್ಳಿ ಹಳ್ಳಿಗೂ ತೆರಳಿ ಜಾಗೃತಿ ಮೂಡಿಸತೊಡಗಿದರು. ಈ ಭೇಟಿಗಳಿಂದಲೇ ಭೋಸರಿಗೆ ಹಳ್ಳಿಗಳ, ದೇಶದ ಬಡವನ, ದಾರಿದ್ರ್ಯದ ಸ್ಪಷ್ಟ ಚಿತ್ರಣ ಸಿಕ್ಕಿತು. ಈ ಸಮಯದಲ್ಲಿ ಭಾರತದಲ್ಲೇ ಭಾರತೀಯರ ಮೇಲೆ ಅಪಮಾನ, ಅವಮಾನ ನಿರಂತರವಾಗಿದ್ದವು. ಬಸ್ಸು, ರೈಲು, ರಸ್ತೆ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಗುಲಾಮಗಿರಿಗಿಂತ ಕಡೆಯಾಗಿ ನಡೆಸಿಕೊಳ್ಳಲಾಗುತ್ತಿತ್ತು. ಎಲ್ಲ ಸ್ಥಳಗಳಲ್ಲಿ ಅಗ್ರಗಣ್ಯತೆ ಬ್ರಿಟೀಷರಿಗೆ ನೀಡಿ ಅವರು ಮಾಡುತ್ತಿದ್ದ ಅನಾಚಾರ, ಕ್ರೌರ್ಯತೆ, ದೌರ್ಜನ್ಯ, ಅಪಮಾನ ಸಹಿಸಿಕೊಂಡು ಜನ ನಡೆಯುತ್ತಿದ್ದರು. ಅಲ್ಲಿ–ಇಲ್ಲಿ ಕೆಲ ಜನರ ತಿರುಗಿ ಬೀಳತೊಡಗಿದಾಗ ಅಂತಹ ಕಡೆ ಅವರ ದೌರ್ಜನ್ಯ ಒಂದು ಮಟ್ಟದಲ್ಲಿ ಇಳಿಕೆಯಾಗುತ್ತಿತ್ತು. ಇದರಿಂದ ಸುಭಾಷರಿಗೆ ಅನಿಸಿದ್ದು "ಏಟಿಗೆ ಪ್ರತಿಯೇಟು ಕೊಟ್ಟರೆ ಬ್ರಿಟೀಷರು ಬುದ್ಧೀ ಕಲಿಯುವರು ಎಂದು".

ಇದಕ್ಕೆ ಇಂಬು ಕೊಡುವ ಘಟನೆಯೊಂದು ಕಾಲೇಜಿನಲ್ಲಿ ಘಟಿಸಿತು. ಸಿ.ಎಫ್. ಓರ್ಟ ಎಂಬ ಆಂಗ್ಲ ಶಿಕ್ಷಕ ಆಳರಸರ ದರ್ಪದಿಂದ ಭಾರತೀಯ ವಿದ್ಯಾರ್ಥಿಗಳ ಜೊತೆಗೆ ಅತ್ಯಂತ ಹೇಯವಾದ

ಪುಟ 6 ಕ್ಕೆ ➢

➢ ಪುಟ 5 ರಿಂದ.....

ನಡವಳಿಕೆಯನ್ನು ಪ್ರದರ್ಶಿಸುತ್ತಲೇ ಬರುತ್ತಿದ್ದ. ಮಿತಿಮೀರಿದ ಆತನ ದಬ್ಬಾಳಿಕೆ, ಧಾರ್ಷ್ಟ್ಯ ನಡತೆಗೆ ವಿನಾಕಾರಣ ಚಾರಿತ್ರ್ಯವಧೆ ಮಾಡುತ್ತಿದ್ದುದರಿಂದ ನಲುಗಿದ ವಿದ್ಯಾರ್ಥಿಗಳು ಸಾಕಷ್ಟು ದೂರು ನೀಡಿದರೂ ಪರಿಗಣಿಸದ ಮೇಲಿನ ಶಿಕ್ಷಣಾಧಿಕಾರಿಗಳ ವಿರುದ್ಧ ಅಸಮಾಧಾನ ಹೊಂದಿ ಆ ಶಿಕ್ಷಕನಿಗೆ ತಕ್ಕ ಶಾಸ್ತಿಯನ್ನು ವಿದ್ಯಾರ್ಥಿಗಳೇ ಮಾಡಿ ಮುಗಿಸಿದರು. ಆ ನಂತರ ಭೋಸರು ವಿದ್ಯಾರ್ಥಿಗಳ ಏಕೈಕ ಪ್ರತಿನಿಧಿಯಾಗಿ ವಿಚಾರಣಾ ಸಮಿತಿಯನ್ನು ಎದುರಿಸಿ ಈ ರೀತಿ ತಮ್ಮ ವಾದ ಮಂಡಿಸಿದರು. "ವಿದ್ಯಾರ್ಥಿಗಳಾದ ನಾವು ಶಿಕ್ಷಕನನ್ನು ದಂಡಿಸಿದ್ದು ನಿಜ. ಆದರೆ ಅವರು ಭಾರತೀಯರೆಂದು ತಿರಸ್ಕಾರ ಭಾವದಿಂದ ನೋಡುತ್ತಾ ಅಗೌರವದಿಂದ ನಡೆಸಿಕೊಂಡರು. ಇವರ ವಿರುದ್ಧ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಆದ್ದರಿಂದ "ಭಾರತೀಯರ ಗೌರವವನ್ನು ಕಾಪಾಡುವುದಕ್ಕಾಗಿ ಆತನಿಗೆ ಬುದ್ಧಿ ಕಲಿಸಿದೆವು. ಇದು ಕೇವಲ ಗುರು– ಶಿಷ್ಯರ ಪ್ರಕರಣವಲ್ಲಾ, ಭಾರತೀಯರ ಆತ್ಮಗೌರವಕ್ಕೆ ಕುಂದು ಬರುವ ಪ್ರಸಂಗ" ಎಂದು ವಿದ್ಯಾರ್ಥಿಗಳ ಪರ ನ್ಯಾಯಯುತ ಧ್ವನಿ ಮೊಳಗಿಸಿದರು.

ಈ ಘಟನೆಯ ನಂತರ ಸುಭಾಷರು ಆ ಕಾಲೇಜಿನಿಂದ ಹೊರಹಾಕಲ್ಪಟ್ಟರು. ಭಾರತವನ್ನು ಸ್ವತಂತ್ರವಾಗಿಸಬೇಕಾದರೆ ಬಂಡಾಯ, ಹೋರಾಟದ ಮೂಲಕವೇ ಸಾಧ್ಯವೆಂದು ನಿಲುವು ತಾಳಿದರು. ಕ್ರಾಂತಿಕಾರಿ ಚಿತ್ತರಂಜನ್ ದಾಸರ ಚಿಂತನೆ, ವೀರ ಸಾವರ್ಕರರ ಮಾರ್ಗದರ್ಶನದಂತೆ ದೇಶದ ಹೊರ ಭಾರತೀಯರನ್ನೂ ಒಗ್ಗೂಡಿಸಿ, ಬ್ರಿಟೀಷರ ವೈರಿಗಳ ಸಹಕಾರ ಪಡೆದು ಅವರನ್ನು ಬಗ್ಗು ಬಡಿದು ಸ್ವಾತಂತ್ರ್ಯಗಳಿಸುವ ಯೋಜನೆಗೆ ಮುಂದೆ ತಯಾರಾದುದು ಹೀಗೆ– ಸುಭಾಷರ ಆದರ್ಶವಾಗಿ ಪರಿಗಣಿಸಿ ಪ್ರಭಾವಕ್ಕೊಳಗಾದ ವ್ಯಕ್ತಿಯೆಂದರೆ ಅದು ಸ್ವಾಮಿ ವಿವೇಕಾನಂದರು. ಸುಭಾಷರ ಜೀವನ ಅಕ್ಷರಷಃ ವಿವೇಕರ ಈ ವಾಣಿಯಂತೆ ಇರುವುದನ್ನು ಕಾಣಬಹುದು. "ಪ್ರತಿ ಕೆಲಸ ಮೂರು ಅವಸ್ಥೆಗಳನ್ನು ಸಾಗಿ ಹೋಗಬೇಕು– "ನಿಂದೆ, ಅಡಚಣೆ, ಆನಂತರ ಸ್ವೀಕಾರ" ಯಾವ ಮನುಷ್ಯ ತನ್ನ ಕಾಲಕ್ಕಿಂತ ಬಹಳ ಮುಂದಾದ ಭಾವನೆಗಳನ್ನು ಹೊಂದಿರುವನೋ ಅವನನ್ನು ಜನರು ಅಪಾರ್ಥ ಮಾಡಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲಾ. ಆದ್ದರಿಂದ ವಿರೋಧ ಹಾಗೂ ಕಿರುಕುಳವನ್ನು ನಾನು ಸ್ವಾಗಿತಿಸುತ್ತೇನೆ. ಆದರೆ ನಾನು ಅಚಲನಾಗಿ ಪರಿಶುದ್ಧನಾಗಿ ಭಗವಂತನಲ್ಲಿ ತೀವ್ರವಾದ ಶ್ರದ್ಧೆಯನ್ನು ಹೊಂದಿರಬೇಕು ಆಗ ಇವೆಲ್ಲಾ ತಂತಾನೆ ಮಾಯವಾಗುತ್ತವೆ.

ವಿಶ್ವಮಹಾಯುದ್ಧದ ಹಲವಾರು ಘಟನಾವಳಿಗಳ ನಂತರ ಭೋಸರು ದೃಢವಾಗಿ ಪ್ರತಿಪಾದಿಸಿದ್ದು "ಬ್ರಿಟೀಷರು ಯಾವುದೇ ಕಾರಣಕ್ಕೂ ಹೃದಯ ಪರಿವರ್ತನೆ ಹೊಂದಿ ತಾವಾಗಿಯೇ ಸ್ವಾತಂತ್ರ್ಯ ನೀಡರು. ಆದ್ದರಿಂದ ಎರಡನೇ ವಿಶ್ವಯುದ್ದದಲ್ಲಿ ಅವರಿಗೆ ಸಹಕಾರ ನೀಡಬೇಕೆಂಬ ಗಾಂಧೀಜಿಯವರ ಸಲಹೆಯನ್ನು ಕಟುವಾಗಿ ವಿರೋಧಿಸಿ "ಕಪಟ ಬ್ರಿಟಿಷರ ಮುಳುಗುವ ಸಾಮ್ರಾಜ್ಯಕ್ಕೆ ಮತ್ತೆ ಅಮೃತಪಾನ ಮಾಡಿಸಿದಂತೆ. ಇದು ಅವರಿಂದ ಈ ನಿರೀಕ್ಷೆಯಿಡುವುದೇ ತಪ್ಪು. ಕೇವಲ ಶಸ್ತ್ರಾಸ್ತ್ರ ಹಿಡಿದು ಹೋರಾಟ ನಡೆಸಿದಲ್ಲಿ ಮಾತ್ರ ಇದು ಸಾಧ್ಯ. ಅದಕ್ಕಾಗಿ ಈ ಯುದ್ಧದಲ್ಲಿ ಬ್ರಿಟಿಷ್– ಅಮೇರಿಕಾ ಮಿತ್ರ ರಾಷ್ಟ್ರಗಳಿಗೆದುರಾಗಿ ನಿಲ್ಲುವ ದೇಶಗಳ ಸಹಯೋಗದೊಂದಿಗೆ ಆಯಾ ದೇಶಗಳಲ್ಲಿರುವ ಭಾರತೀಯರನ್ನೆಲ್ಲಾ ಒಗ್ಗೂಡಿಸಿ ಸೈನ್ಯ ಪಡೆ ರಚಿಸಿ ಬ್ರಿಟಿಷರನ್ನು ಎದುರಿಸುವುದೇ ದಾರಿ" ಎಂಬುದನ್ನು ಬಲವಾಗಿ ನಂಬಿ ಎಲ್ಲೆಡೆ ಇದನ್ನೇ ಮೊಳಗಿಸತೊಡಗಿದರು. ಇದು ಬ್ರಿಟಿಷರಿಗೆ ನುಂಗಲಾರದ ತುತ್ತಾಯಿತು. ಏಕೆಂದರೆ ತಮ್ಮ ಕಳ್ಳಜಾಡಿನ ರಹಸ್ಯ ಕಂಡು ಹಿಡಿದುದಲ್ಲದೆ ತಮ್ಮ ಯಾವುದೇ ಬಲೆಗೆ ಸಿಕ್ಕಿ ಬೀಳದ ಈ ಸ್ವಾತಂತ್ರ್ಯದ ಹುಲಿಯನ್ನು ಕಟ್ಟಿ ಹಾಕುವುದಕ್ಕೋಸ್ಕರ ಷಡ್ಯಂತ್ರ ರಚಿಸಿತು. ಕಲ್ಕತ್ತೆಯ ಹಾಲ್‌ವೆಲ್ ಸ್ಮಾರಕ ಕಿತ್ತಸೆಯುವ ಚಳುವಳಿಯಲ್ಲಿ ಭಾಗವಹಿಸಿದ್ದರೆಂಬ ಸುಳ್ಳು ಆಪಾದನೆ ಮೇಲೆ ಯಾವುದೇ ವಿಚಾರಣೆ ನಡೆಸದೆ ಸುಭಾಷರನ್ನು ಜೈಲಿನಲ್ಲಿ ಕೊಳೆಯುವಂತೆ ಮಾಡಿತು. ಯುದ್ದ (2 ವಿಶ್ವಸಮರ) ಮುಗಿಯುವವರೆಗೂ ಬಂದ ಮುಕ್ತಿಗೊಳ್ಳದಂತೆ ಮಾಡಿ ತಮ್ಮ ಸಾಮ್ರಾಜ್ಯ ರಕ್ಷಣೆ ಮಾಡುವ ಹುನ್ನಾರ ಸರ್ಕಾರ ಮಾಡಿತು. ಸುಭಾಷರು ಇದನ್ನೆಲ್ಲಾ ಅರಿತು ಪಾರಾಗುವ ಯೋಜನೆ ಹೂಡಿದರು. ಬಂಗಾಳದ ಗವರ್ನರ್‌ಗೆ ಪತ್ರ ಬರೆದರು. ಉಪವಾಸ ಸತ್ಯಾಗ್ರಹ ಆರಂಭಿಸಿ ದೊಡ್ಡ ರಾದ್ಧಾಂತ ಸೃಷ್ಟಿಯಾಗುವಂತೆ ಮಾಡಿದರು. ಸರ್ಕಾರ ಭೋಸರನ್ನು ಬಿಡುಗಡೆಗೊಳಿಸಿ ಮನೆಗೆ ಕಳುಹಿಸಿದಾಗ ವೈಸ್‌ರಾಯ್‌ರಿಗೆ ಪತ್ರ ಮುಖೇನ ಎಲ್ಲಾ ಬೆಳವಣಿಗೆಗಳಿಂದ ನೊಂದು ಬೇಸರವಾಗಿ ಸಂನ್ಯಾಸಿಯಾಗಿ ಹಿಮಾಲಯಕ್ಕೆ ತೆರಳುವ ವಿಚಾರ ಸರ್ಕಾರದ ಕಿವಿಗೆ ಮುಟ್ಟುವಂತೆ ಮಾಡಿದರು. ಮನೆಯಿಂದ ಹೊರಬರದೆ ಯಾರನ್ನೂ ಭೇಟಿಯಾಗದೆ ಅಂತರ್‌ಮುಖಿಯಾಗಿರುವರೆಂದು ಸುದ್ದಿ ಹಬ್ಬಿಸಿದರು. ಆ ಸಮಯದಲ್ಲಿ ಗಡ್ಡಬೆಳೆಸಿದರು. ಯಾರಿಗು ಸಂಶಯ ಬರದ ರೀತಿ ಎಲ್ಲಾ ಚಟುವಟಿಕೆ ಸ್ಥಗಿತಗೊಳಿಸಿದಂತಿದ್ದರು. 1941, ಜನವರಿ 26 ಅವರ ಮೇಲಿನ ಆಪಾದನೆಯ ಖಟ್ಲೆಗೆ ಹಾಜರಾಗಲು ಪೋಲಿಸರು ಕರೆದೊಯ್ಯಲು ಬಂದಾಗ ಬ್ರಿಟಿಷರಿಗೆ ವಾಸ್ತವದ ಅರಿವಾಗಿತ್ತು. ಜನವರಿ 17ರ ಮುಂಜಾನೆ ನಸುಗತ್ತಲಲ್ಲಿ ಮೌಲ್ವಿವೇಷ ಧರಿಸಿದ ಫಕೀರ ಭೋಸರ ಮನೆ ಮುಂದಿನ ಮೋಟರಿನಲ್ಲೇರಿ 210 ಕಿ.ಮಿ ದೂರದ ಗೋಮೋ ರೈಲ್ವೆ ನಿಲ್ದಾಣ ಸೇರಿ ರೈಲಿನಲ್ಲಿಯೇ "ಮೌಲ್ವಿಜಿಯಾವುದ್ದೀನ್" ನಾಮಧೇಯದೊಂದಿಗೆ ಪೇಷಾವರ್‌ಗೆ ಪ್ರಯಾಣ ಮಾಡಿ, ಪುಶ್ತು ಭಾಷೆ ಬರದ ಕಾರಣ ಮೂಗನಂತೆ ನಟಿಸಿ ಕಾಬೂಲ್ ತಲುಪಿ, ತನ್ನ ಧ್ಯೇಯೋದ್ದೇಶದ ಕಡೆ ಹಿಂದೂ ಹುಲಿ ಹಾರಿತ್ತು. ಹೇಗೆ ಹಾರಿತ್ತು ಎನ್ನುವುದನ್ನು ಅರಿಯಲು ಬ್ರಿಟಿಷರಿಗೆ ಒಂದು ವರುಷದ ಸಮಯ ಬೇಕಾಯಿತು.

ಹೆಜ್ಜೆ–ಹೆಜ್ಜಗೂ ಅಪಾಯ, ಗುಪ್ತಚರರ ಜಾಲ, ವಿಶ್ವಾಸದ್ರೋಹಗಳ ಕೂಟ ಕುತ್ಸಿತ ಬ್ರಿಟಿಷರ ಯೋಜನೆ ತಲೆಕೆಳಗೆ ಮಾಡುತ್ತಾ ಸುಭಾಷರು, ಬರ್ಲಿನ್, ಮಾಸ್ಕೋ, ಇಟಲಿ, ಜಪಾನ್ ಎಲ್ಲ ರಾಷ್ಟ್ರಗಳತ್ತ ತೆರಳಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೈ ಜೋಡಿಸಲು ಹಾಗು ತಮ್ಮ ಸೈನ್ಯಕ್ಕೆ ದೇಶದ ಸ್ವಾಯತ್ತತೆಯನ್ನು ಒಪ್ಪುವಂತೆ ಮಾಡಿದ್ದು ಅಲ್ಲವೇ? ಯಾವ ರಾಷ್ಟ್ರದ ಕೈಗೊಂಬೆಯಾಗದೇ ಭಾರತದ ಗೌರವಕ್ಕೆ ಧಕ್ಕೆ ತರದಂತೆ ನಡೆದುಕೊಂಡ ಭೋಸರ ತಮ್ಮ ಕೊನೆಯ ಕ್ಷಣದಲ್ಲಿ ಹಬೀಬುರ್ ರೆಹಮಾನರನ್ನು ಕರೆದು ಹೇಳಿದ ಕಡೆಯಮಾತು "ನಾನು ಇನ್ನು ಉಳಿಯಲಾರೆ. ಕಡೆಯ ಉಸಿರಿನವರೆಗೂ ಭಾರತದ ಸ್ವಾತಂತ್ರ್ಯಕ್ಕಾಗಿ ನಾನು ಹೋರಾಟ ನಡೆಸಿದ್ದೇನೆ. ಭಾರತವು ಇಷ್ಟರಲ್ಲೇ ಸ್ವತಂತ್ರ್ಯವಾಗುವುದಾಗಿ ನನ್ನ ದೇಶ ಬಾಂಧವರಿಗೆ ತಿಳಿಸಿ. ಚಿರಕಾಲ ಬಾಳಲಿ ಸ್ವತಂತ್ರ ಭಾರತ"

ಇದೊಂದೆ ಮಾತು ಸಾಕು ಮೇರು ವ್ಯಕ್ತಿತ್ವದ ಬೋಸರನ್ನು ಅರಿಯಲು.

**ಜೈಹಿಂದ್**

●

**ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸವು ಮಿದುಳಿನ ಏಕಾಗ್ರತೆ, ವಿಷಯಗಳ ಸಂಗ್ರಹವಲ್ಲ. – ಸ್ವಾಮಿ ವಿವೇಕಾನಂದ**

**ವಿದ್ಯಾರ್ಥಿ ಜ್ಞಾನ ಮಿತ್ರ**

# ಭಾರತ ಪರಿಚಯ

**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ನಮ್ಮ ದೇಶ ಭಾರತ. ಇದು ಪ್ರಗತಿಯ ಚಿಹ್ನೆ. ಭಾರತ, ಈ ಪದದಲ್ಲಿರುವ ಮೂರು ಅಕ್ಷರಗಳು ಭಾವ–ರಾಗ–ತಾಳಗಳನ್ನು ಪ್ರತಿನಿಧಿಸುತ್ತವೆ. ಇವು ಪರಸ್ಪರ ಹೊಂದಿಕೊಂಡಾಗ ಸಂಗೀತದಲ್ಲಿ ಸಾಮರಸ್ಯ. ವಿಶ್ವಕ್ಕೆ ಬೆಳಕು ನೀಡಿದ ಜ್ಞಾನವನ್ನು ಧಾರೆಯೆರೆದ ಭಗವಂತನ ನಾಡೇ ಈ ನಮ್ಮ ಭಾರತ.

ವಾಸ್ತವಿಕವಾಗಿ 'ಭಾರತ' ಎಂಬ ಹೆಸರು, ಇದು ನಮ್ಮ ತಾಯಿ ಎಂಬುದನ್ನು ಸೂಚಿಸುತ್ತದೆ. ದುಷ್ಯಂತ–ಶಕುಂತಲೆಯ ಮಗನಾದ ಭರತನಿಂದ ನಮ್ಮ ದೇಶ ಭಾರತವಾಯಿತು ಎಂಬ ಸಂಗತಿಯು ಮಹಾಭಾರತದಲ್ಲಿ ಉಲ್ಲೇಖವಿದೆ.

ನಮ್ಮ ಪವಿತ್ರ ಭಾರತ ರಾಮ–ಕೃಷ್ಣರು ಅವತರಿಸಿದ ದೇವ ಭೂಮಿ. ಬಾಳಿನ ಸಾರ್ಥಕತೆ ಕಂಡ ಮುಗಿಲೆತ್ತರಕ್ಕೆ ಬದುಕನ್ನೆತ್ತಿದ ಮಹಾಮಹಿಮರ ಮಾತೃಭೂಮಿ. ಮಾನವನನ್ನು ಪೂರ್ಣತೆಗೆ ಕರೆದೊಯ್ಯಬಲ್ಲ ದೇವಾಂಶ ಸಂಭೂತರಾದ ಶಿವಾಜಿ, ರಾಣಾಪ್ರತಾಪ ಸಿಂಹ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಹರಿಹರ–ಬುಕ್ಕ, ವಿದ್ಯಾರಣ್ಯ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರ, ಗೌತಮ ಬುದ್ಧ, ಕಿತ್ತೂರು ಚೆನ್ನಮ್ಮ, ವಿವೇಕಾನಂದ, ಬಂಕಿಮಚಂದ್ರ, ಅರವಿಂದ, ರವೀಂದ್ರನಾಥ ಠಾಕೂರರ ಪ್ರಾಣ ಸ್ವರೂಪಿ, ಗುರುಸ್ವರೂಪಿ, ಭಾರತ ಭೂಮಿ. ಬ್ರಹ್ಮರ್ಷಿ– ರಾಜರ್ಷಿಗಳ ಧಾಮ. ಕವಿ ಪುಂಗವರ ಪುಣ್ಯಧಾಮ.

ಇಂತಹ ಶ್ರೇಷ್ಠ ಭಾರತ ದೇಶದಲ್ಲಿ ಜನಿಸಿದ ನಾವೇ ಧನ್ಯರಲ್ಲವೇ? ನಮ್ಮ ದೇಶದ ಹಿರಿಮೆ–ಗರಿಮೆಯನ್ನು ಇನ್ನೂ ಎತ್ತರಕ್ಕೆ ಬೆಳೆಸುವ ಜವಾಬ್ದಾರಿಯನ್ನು ನಾವೆಲ್ಲರೂ ನಿರ್ವಹಿಸಬೇಕಾಗಿದೆ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಅಯೋಧ್ಯೆ ನಗರವು ಯಾವ ನದಿ ತೀರದಲ್ಲಿದೆ?
2. ಅಯೋಧ್ಯೆ ನಗರವನ್ನು ನಿರ್ಮಿಸಿದ ಚಕ್ರವರ್ತಿ ಯಾರು?
3. ಮರ್ಯಾದಾ ಪುರುಷೋತ್ತಮ ಎಂದು ಯಾರನ್ನು ಕರೆಯುತ್ತಾರೆ?
4. ಅಯೋಧ್ಯೆ ನಗರವು ಯಾವ ರಾಜ್ಯದಲ್ಲಿದೆ?
5. ರಾಮಾಯಣ ಪವಿತ್ರ ಕೃತಿಯನ್ನು ಮೊದಲು ಬರೆದವರು ಯಾರು?

## ಜ್ಞಾನ ವಿಜ್ಞಾನ

1. ಭಾರತದ ರಾಷ್ಟ್ರಪಕ್ಷಿ ಯಾವುದು?
2. ಸಾಮಾನ್ಯ ಉಪ್ಪಿನ ರಾಸಾಯನಿಕ ಹೆಸರೇನು?
3. ಹಾರುವ ಬಲೂನ್‌ಗಳಲ್ಲಿ ಯಾವ ಅನಿಲವನ್ನು ತುಂಬುತ್ತಾರೆ?
4. ಸೂರ್ಯನ ಬೆಳಕು ಯಾವ ಜೀವಸತ್ವವನ್ನು ಕೊಡುತ್ತದೆ?
5. ಭಾರತದ ರಾಷ್ಟ್ರ ಪುಷ್ಪ ಯಾವುದು?

## ಡಿಸೆಂಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ದ್ವಾಪರ ಯುಗ
2. ಸರ್ದಾರ್ ವಲ್ಲಭಭಾಯ್ ಪಟೇಲ್
3. ಇಮ್ಮಡಿ ಪುಲಕೇಶಿ
4. ರಾಷ್ಟ್ರಕೂಟರು
5. ಹಲ್ಮಿಡಿ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಡಾ॥ ಎಂ.ಎಸ್ ಸ್ವಾಮಿನಾಥನ್
2. ನೈಟ್ರಸ್ ಆಕ್ಸೈಡ್
3. ಕಾರ್ಬೋನಿಕ ಆಮ್ಲ
4. ಇನ್ಸುಲಿನ್
5. ಆಯುರ್ವೇದ, ಚರಕ

# ಶ್ರೀರಾಮಮಂದಿರಕ್ಕೆ ಶುಭ ಮುಹೂರ್ತ

➢ ಹಿಂದಿನ ಸಂಚಿಕೆಯಿಂದ...

## ಸತ್ಯ, ನ್ಯಾಯಗಳ ಮಂಥನ

– **ಮೋಹನ್ ಭಾಗವತ್,**
ಸರಸಂಘಚಾಲಕರು, ರಾ.ಸ್ವ.ಸೇ.ಸಂಘ

ಸುಪ್ರೀಂಕೋರ್ಟ್ ನಿರ್ಣಯ ಸಂಬಂಧದಲ್ಲಿ ಜನರಭಾವನೆ, ನಂಬಿಕೆಗಳಿಗೆ ನ್ಯಾಯ ಒದಗಿಸುವ ಗೌರವಾನ್ವಿತ ಸರ್ವೋಚ್ಚನ್ಯಾಯಾಲಯದ ಈ ತೀರ್ಪನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘವು ಸ್ವಾಗತಿಸುತ್ತದೆ. ದಶಕಗಳಿಂದ ನಡೆಯುತ್ತಿದ್ದ ಸುದೀರ್ಘ ಕಾನೂನಾತ್ಮಕ ಪ್ರಕ್ರಿಯೆಯು ನ್ಯಾಯಯುತವಾಗಿ ಇಂದು ಪೂರ್ಣಗೊಂಡಿದೆ. ಈ ಸುದೀರ್ಘ ಪ್ರಕ್ರಿಯೆಯಲ್ಲಿ ಶ್ರೀರಾಮಜನ್ಮಭೂಮಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಒಳಗೊಂಡ ಚರ್ಚೆ, ವಿಚಾರಣೆಗಳು ನಡೆದಿವೆ. ಎಲ್ಲಾ ಪಕ್ಷದವರೂ ತಮ್ಮತಮ್ಮ ದೃಷ್ಟಿಕೋನದ ಪ್ರಕಾರ ನ್ಯಾಯಾಲಯದ ಮುಂದಿಟ್ಟ ವಾದಗಳ ಮೌಲ್ಯಮಾಪನ ನಡೆದಿದೆ. ಧೈರ್ಯದಿಂದ, ಸತ್ಯ ಹಾಗೂ ನ್ಯಾಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕೆಲಸಮಾಡಿದ ನ್ಯಾಯಮೂರ್ತಿಗಳಿಗೆ ಹಾಗೂ ಎಲ್ಲಾ ಪಕ್ಷಗಳ ವಕೀಲರುಗಳಿಗೆ ನಾವು ಶತಶತ ನಮನಗಳನ್ನು, ಅಭಿನಂದನೆಗಳನ್ನು ಅರ್ಪಿಸುತ್ತೇವೆ. ಈ ಸುದೀರ್ಘಾವಧಿಯ ಪ್ರಯತ್ನದಲ್ಲಿ ತಮ್ಮ ಯೋಗದಾನ ನೀಡಿದ ಸಹಕಾರಿಗಳನ್ನು, ಪ್ರಾಣತೆತ್ತ ಬಲಿದಾನಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಭ್ರಾತೃತ್ವವನ್ನು ಬೆಳೆಸುವ ಹಾಗೂ ಕಾನೂನುಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪಾತ್ರವಹಿಸಿರುವ ಸರ್ಕಾರಗಳು ಹಾಗೂ ನಿರ್ಣಯ ಸ್ವೀಕಾರದ ಮನಃಸ್ಥಿತಿ ಹೊಂದಿರುವ ಈ ದೇಶದ ಜನತೆಯನ್ನು ಅಭಿನಂದಿಸಲೇಬೇಕು. ಅತ್ಯಂತ ಸಂಯಮದಿಂದ ನ್ಯಾಯದ ಪ್ರತೀಕ್ಷೆ ಮಾಡುತ್ತಿದ್ದ ಭಾರತೀಯರೆಲ್ಲರೂ ಅಭಿನಂದನೆಗೆ ಅರ್ಹರು. ಈ ತೀರ್ಪನ್ನು ಗೆಲುವುಸೋಲು ಎಂಬುದಾಗಿ ಪರಿಗಣಿಸುವುದು ತಪ್ಪಾಗುತ್ತದೆ. ಸತ್ಯ ಹಾಗೂ ನ್ಯಾಯದ ಮಂಥನದಿಂದ ದೊರೆತ ಈ ತೀರ್ಪನ್ನು ಸಂಪೂರ್ಣಸಮಾಜದ ಏಕಾತ್ಮತೆ ಹಾಗೂ ಬಂಧುತ್ವವನ್ನು ಬೆಳೆಸುವ ನಿಟ್ಟಿನಲ್ಲಿ ಬಂದ ತೀರ್ಪು ಎಂದು ನೋಡಬೇಕಿದೆ. ಕಾನೂನು ಹಾಗೂ ಸಂವಿಧಾನಕ್ಕೆ ಗೌರವ ನೀಡುತ್ತ ಸಂಯಮದಿಂದ, ಸಾತ್ವಿಕ ರೀತಿಯಿಂದ ತಮ್ಮ ಆನಂದ, ಸಂತೋಷವನ್ನು ವ್ಯಕ್ತಪಡಿಸಬೇಕೆಂದು ಎಲ್ಲಾ ದೇಶವಾಸಿಗಳನ್ನು ಕೋರುತ್ತೇವೆ. ಈ ವಿವಾದವನ್ನುಕೊನೆಗಾಣಿಸುವ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಈ ತೀರ್ಪನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಶೀಘ್ರವಾಗಿ ಕಾರ್ಯನಿರ್ವಹಿಸಲಿದೆ ಎಂಬ ಬಗ್ಗೆ ನಮಗೆ ವಿಶ್ವಾಸವಿದೆ.

## ಇದು ಯಾರ ಗೆಲುವು ಅಥವಾ ಸೋಲು ಅಲ್ಲ

– **ನರೇಂದ್ರ ಮೋದಿ,** ಪ್ರಧಾನ ಮಂತ್ರಿ

ರಾಮಭಕ್ತಿ ಅಥವಾ ರಹೀಮಭಕ್ತಿಯೇ ಇರಲಿ, ನಾವೆಲ್ಲರೂ ರಾಷ್ಟ್ರಭಕ್ತಿಯನ್ನು ಬಲಗೊಳಿಸುವ ಅಗತ್ಯವಿದೆ. ನ್ಯಾಯದೇಗುಲವು (ಸುಪ್ರೀಂಕೋರ್ಟ್) ದಶಕಗಳ ಕಾಲದಿಂದ ನಡೆಯುತ್ತಿದ್ದ ವಿವಾದವನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಿದೆ. ನ್ಯಾಯಾಂಗವ್ಯವಸ್ಥೆಯ ಮೇಲಿನ ಜನರವಿಶ್ವಾಸಕ್ಕೆ ತೀರ್ಪು ಮತ್ತಷ್ಟು ಬಲ ತುಂಬುತ್ತದೆ, ಎಂದು ನರೇಂದ್ರಮೋದಿ ಹೇಳಿದರು. ಈ ತೀರ್ಪನ್ನು ಯಾರದ್ದೇ ಗೆಲ್ಲುವು ಅಥವಾ ಮತ್ಯಾರದ್ದೋ ಸೋಲು ಎಂದು ಪರಿಭಾವಿಸಬಾರದು. ಯಾವುದೇ ವಿವಾದವನ್ನು ಸೌಹಾರ್ದಯುತವಾಗಿ ಕಾನೂನುಮಾರ್ಗದಲ್ಲಿ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಈ ತೀರ್ಪು ಎತ್ತಿತೋರಿಸಿದೆ. ನ್ಯಾಯಾಂಗದ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ದೂರದೃಷ್ಟಿತ್ವವನ್ನು ದೃಢಪಡಿಸಿದೆ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ನೀಡಿರುವ ಮಹತ್ವಪೂರ್ಣ ತೀರ್ಪಿನ ಹಿಂದೆ ಹಲವು ವರ್ಷಗಳ ದೀರ್ಘಕಾಲದ ಇತಿಹಾಸವಿದೆ. ದಶಕಗಳ ಕಾಲ ನಡೆದ ನ್ಯಾಯ ಪ್ರಕ್ರಿಯೆ ಸಮಾಪ್ತಿಗೊಂಡಿದೆ. ಭಾರತವು ವಿಶ್ವದ ಅತಿ ದೊಡ್ಡ ಪ್ರಜಾತಂತ್ರ ದೇಶವೆಂದು ವಿಶ್ವ ತಿಳಿದಿದೆ. ಆದರೆ ಭಾರತದ ಪ್ರಜಾತಂತ್ರ ಎಷ್ಟುಜೀವಂತವಾಗಿದೆ ಎಂಬುದನ್ನು ಈ ತೀರ್ಪು ಸಾಬೀತುಪಡಿಸಿದೆ. ನ್ಯಾಯಾಲಯದ ತೀರ್ಪು ಬಂದನಂತರ ಪ್ರತಿ ವರ್ಷ, ಸಮುದಾಯ ಮತ್ತು ವಿವಿಧ ಪಂಥಗಳ ಜನರು ತೆರೆದ ಹೃದಯದಿಂದ ತೀರ್ಪನ್ನು ಸ್ವಾಗತಿಸಿದೆ. ಭಾರತದ ಪುರಾತನಸಂಸ್ಕೃತಿ ಮತ್ತು ಸದ್ಭಾವನೆಯನ್ನು ಇದು ಎತ್ತಿತ್ತೋರಿಸಿದೆ. ಭಾರತದ ವಿವಿಧತೆಯಲ್ಲಿ ಏಕತೆ ಎಂಬ ಮಂತ್ರ ಇಂದು ಮತ್ತಷ್ಟು ಗಟ್ಟಿಗೊಂಡಿದೆ. 130 ಕೋಟಿ ಜನರು ಹೊಸ ಇತಿಹಾಸ ರಚಿಸಿದ್ದಾರೆ. ಭಾರತದ ನ್ಯಾಯಾಂಗದ ಇತಿಹಾಸದಲ್ಲೂ ಇದು ಸ್ವರ್ಣಿಮ ಸಮಯವಾಗಿದೆ.

## ಸಮರ್ಥ ಭಾರತ ಸಂಕಲ್ಪ

2019, ನವೆಂಬರ್ 9, ಶನಿವಾರ; ಇಡೀ ಭಾರತದೇಶದ ಮಾತ್ರವಲ್ಲ, ಆಗ ಸೂರ್ಯರಶ್ಮಿ ಬೆಳಗುತ್ತಿದ್ದ ದೇಶಗಳ ಜನರೆಲ್ಲರೂ ದೂರದರ್ಶನದ ಎದುರು ಕುಳಿತು ಏನು ತೀರ್ಮಾನ? ಎಂದು ಕುತೂಹಲದಿಂದ ಕಾಯುತ್ತಿದ್ದ 35–40 ನಿಮಿಷದ ಅವಧಿ. ನಂತರ 'ಹಾಯ್' ಎಂದು ಹೇಳುತ್ತಾ ತಂತಮ್ಮ ಕೆಲಸಗಳಿಗೆ ತೆರಳಿದ್ದನ್ನು ಎಲ್ಲರೂ ಕಂಡಿದ್ದಾರೆ. ಎಷ್ಟೋ ವರ್ಷಗಳ ಹೋರಾಟದ ಅಂತ್ಯ ಎಂಬ ಭಾವ ಕೆಲವರಿಗೆ; ಶ್ರೀರಾಮ ಮಂದಿರವನ್ನು ಸಂದರ್ಶಿಸಿ ಭಕ್ತಿಭಾವದಿಂದ ಪೂಜಿಸುವ ಅದೃಷ್ಟ ದೊರೆತಿರುವ ನಾನೇ ಧನ್ಯ ಎಂಬ ಧೀರ್ಘ ನಿಟ್ಟುಸಿರು ಕೆಲವರಿಗೆ; ಎಲ್ಲೂ ಹೊಡೆದಾಟ, ಬಡಿದಾಟಗಳ ಸುದ್ದಿ ಸಮಾಚಾರವಿಲ್ಲ, ಎಲ್ಲೆಲ್ಲೂ ಸಮಾಧಾನ, ಸಂತೋಷ. ಇದೊಂದು ಹೆಗ್ಗಳಿಕೆಯ ದಿನ ಇತ್ಯಾದಿ ಭಾವಭಾವನೆಗಳು ಪ್ರಕಟಗೊಂಡ ಮುಹೂರ್ತ. ರಾಮಮಂದಿರ ನಿರ್ಮಾಣದ ನಿಮಿತ್ತ ಪ್ರಾಣನೀಡಿದ ಹುತಾತ್ಮರ ನೆನಹು; ಅವರ ಆತ್ಮಕ್ಕೆ ತೃಪ್ತಿತಂದ ಮುಹೂರ್ತ. ಹರ್ಷ, ಉದ್ಗಾರ, ತೃಪ್ತಿ, ಸಮಾಧಾನ, ಪ್ರಾಯಶಃ ದೀರ್ಘ ನಿಟ್ಟುಸಿರುಬಿಟ್ಟವರು ಪೋಲಿಸ್ ಮತ್ತು ಮಿಲಿಟರಿ ಪಡೆಗಳೇ ಇರಬೇಕು! ದಿವಂಗತ ಶ್ರೀಶ್ರೀ ಪೇಜಾವರರಂತೂ ಈ ತೀರ್ಪನ್ನು ತಮ್ಮ ಜೀವಿತಾವಧಿಯಲ್ಲಿ ಕೇಳಲಾರೆ ಎಂದು ಭಾವಿಸಿಕೊಂಡಿದ್ದವರಲ್ಲಿ ಓರ್ವರು. ಅವರು ಈ ತೀರ್ಪನ್ನು ಕೇಳಿ ಅದನ್ನು ಸ್ವಾಗತಿಸಿದ್ದಂತೂ ನಿಜ. ಆದರೆ ರಾಮಮಂದಿರ ಕಟ್ಟುವ ಮುನ್ನವೇ, ಶ್ರೀಕೃಷ್ಣನ ಪಾದಾರವಿಂದ ಸೇರಿಕೊಂಡದ್ದು ನಮ್ಮೆಲ್ಲರಿಗೂ ಕೊಂಚ ದುಃಖ, ಅಸಮಾಧಾನದ ಸಂಗತಿಯೇ. ರಾಮಮಂದಿರ ಸಾಕಾರಗೊಂಡ ಧನ್ಯತೆ ಸಾಧಿಸಿದ ಜನತಾ ಜನಾರ್ಧನನ ಮನಸ್ಸಿನಲ್ಲಿ ಹಲವು ಕ್ಷಣದ ನಂತರ ಮತ್ತೊಂದು ಪ್ರಶ್ನೆಯೂ ಎದ್ದಿರಲಿಕ್ಕೆ ಸಾಕು. ಈ ಕ್ಷಣವನ್ನು ಪ್ರತ್ಯಕ್ಷ ಅನುಭವಿಸಲು ದೇಶ ಎಷ್ಟು ಕಷ್ಟ ಅನುಭವಿಸಿತು? ಅದೆಷ್ಟು ಹೋರಾಟ? ಅದೆಷ್ಟು ಬಲಿದಾನಗಳು? ಇಷ್ಟೊಂದು ತ್ಯಾಗ ದೇವಸ್ಥಾನ ನಿರ್ಮಾಣವೊಂದಕ್ಕೆ ಬೇಕಾಗಿತ್ತೇ? ಹಾಗಿದ್ದಲ್ಲಿ ಎಲ್ಲ ದೇವಾಲಯಗಳ–ಊರೂರುಗಳ ಲಕ್ಷಾಂತರ ಸಂಖ್ಯೆಯ ನಡುವೆ ಇದು ಏಕೆ ಬೇಕಿತ್ತು? ಇದರ ವೈಶಿಷ್ಟ್ಯ ಉಂಟೆ? ಏಕಿಷ್ಟು ಸಂಭ್ರಮ, ತೊಳಲಾಟ?

ಈ ಪ್ರಶ್ನೆಗಳು ಎದುರಾದಾಗ, ಸಾಧಾರಣವಾಗಿ ಈಗಾಗಲೇ ಅಸ್ತಿತ್ವದಲ್ಲಿರುವ, ವೈಭವಯುತ ದೇವಾಲಯಗಳ ಕುರಿತು ಚಿಂತನೆ ಹರಿಯುತ್ತದೆ. ತಿರುಪತಿ, ಮಧ್ಯಪ್ರದೇಶದ ಮೋಹನ್‌ಖೇಡಾ, ಅಕ್ಷರಧಾಮ, ಶಿರಡಿಸಾಯಿಬಾಬಾ, ಸತ್ಯಸಾಯಿಬಾಬಾ ಹೀಗೆ ನೂರಾರು ಸಂಖ್ಯೆಯ ದೇವಸ್ಥಾನಗಳು ತಮ್ಮ ಆದಾಯದಿಂದ ಶಾಲೆ, ಧರ್ಮಛತ್ರ, ನೀರಾವರಿ,

ಪುಟ 9 ಕ್ಕೆ ➢

➢ ಪುಟ 8 ರಿಂದ.....

ಆಸ್ಪತ್ರೆಗಳಂತಹ ನೂರೆಂಟು ಸೇವಾ ಚಟುವಟಿಕೆ ನಡೆಸುತ್ತಾ, ಜನಸೇವೆ ಮಾಡುತ್ತಾ, ಸರಕಾರಕ್ಕೆ ನೆರವಾಗುತ್ತಾ ಬಂದಿರುವ ದೃಶ್ಯ ಕಾಣಲಾದೀತು. ಅಯೋಧ್ಯೆಯ ರಾಮಲಲ್ಲಾ ಮಂದಿರವು ಸಾಕಷ್ಟು ಭವ್ಯ, ಕೋಟ್ಯಂತರ ಭಕ್ತರ ಶ್ರದ್ಧಾಸ್ಥಾನ – ಇದೂ ಇಂತಹ ಜನೋಪಯೋಗಿ, ಪಾಪಪರಿಹಾರಿಕ ಸೇವಾಕಾರ್ಯಗಳಿಗೆ ದೊಡ್ಡ ಪ್ರಮಾಣದಲ್ಲೇ ಕೈಹಾಕೀತು; ಬಡಜನರ ಆರ್ಥಿಕ, ಪಾರಮಾರ್ಥಿಕ, ಭಾವಾತ್ಮಕ, ಭಾವಗಳನ್ನು  ಬೆಳಗುವ ಕೇಂದ್ರ ಆದೀತು; ಹೀಗೆ ಹತ್ತು ಹಲವು ಎಂಬ ಭಾವನೆ ಹುಟ್ಟಿ ಬಂದರೆ ಅದು ವಾಸ್ತವವೇ. ಜನರ ಭಕ್ತಿ ಭಾವನೆಗಳ ಉದ್ಗಾತನಾಗಿ ಅದು ಎದ್ದು ನಿಂತಾಗ, ತಸ್ತ, ಪೀಡಿತ ಜನಸಮುದಾಯಕ್ಕೆ ಅದೊಂದು ಭವ್ಯ ಊರುಗೋಲೇ ಆದೀತು. ಈ ಮಾತಿನಲ್ಲೂ ಎದ್ದು ಕಾಣುವುದು ಸತ್ಯದ ಪ್ರಭೆಯೇ.

ರಾಮಮಂದಿರ ನಿರ್ಮಾಣಕ್ಕೆ ಅಂದಾಜು 50 ರಿಂದ 100 ಕೋಟಿ ಹಣ ಬೇಕಾಗುತ್ತದೆಂಬ ಅನಧಿಕೃತ ಅಂದಾಜುಪತ್ರಕ ಸುದ್ದಿಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಕೆಲವು ಮನಮಸ್ತಿಷ್ಕಗಳಲ್ಲಿ ಕಲ್ಲು, ಸಿಮೆಂಟ್ ಕಟ್ಟಡಕ್ಕಾಗಿ ಇಷ್ಟೊಂದು ಹಣವೇ? ಬದಲಿಗೆ ರಸ್ತೆ ನಿರ್ಮಾಣ, ನೀರು, ದೀಪ – ಹೀಗೆ ಗ್ರಾಮಗಳ ನಗರಗಳ ಉದ್ಧಾರಕ್ಕೆ ಇದು ಬಳಕೆಯಾದರೆ ಹೆಚ್ಚು ಸಾರ್ಥಕವಲ್ಲವೇ? ಈ ಧಾಟಿಯ ಚಿಂತನಮಂಥನ ನಡೆದರೂ ಆಶ್ಚರ್ಯವಿಲ್ಲ. ಏಕೆಂದರೆ ಹಣ ಖರ್ಚು ಏತಕ್ಕಾಗಿ? ನವನಿರ್ಮಾಣಕ್ಕಾಗಿ, ಅಭಿವೃದ್ಧಿಗಾಗಿ ಎಂಬ ಸೂತ್ರವೇ ಎಲ್ಲೆಲ್ಲೂ ಜಾರಿಯಲ್ಲಿರುವ ಚಿಂತನೆ ಮತ್ತು ಕಾರ್ಯಶೈಲಿಯ ಕಾರಣದಿಂದಾಗಿ, ಹಾಗೆ ಹೇಳಿದ್ದಾರು; ಅದೂ ಸರಿಮಾತೇ. ಆದರೆ ಅಯೋಧ್ಯೆ ರಾಮಮಂದಿರವಂತೂ ಇಂತಹ ಆರ್ಥಿಕ ಚಿಂತನೆಗಷ್ಟೇ ಸೀಮಿತವಾಗಿಲ್ಲ ಎಂಬುದೇ ತಥ್ಯ. ಏಕೆಂದರೆ ಈ ಮಹಾನ್ ಸಾಧನೆಗಾಗಿ ಹೆಚ್ಚು ಪ್ರಮಾಣದ ಹೋರಾಟ, ಬಲಿದಾನಗಳೆಂಬ ಭಾವಾತ್ಮಕ ಸಂಗತಿಗಳೂ ಜರುಗಿವೆ. ಅದು ದೇಶದ ಅಸ್ಮಿತೆಗೆ, ತನ್ನತನಕ್ಕೆ ಸಂಬಂಧಿಸಿದ್ದು. ರಾಷ್ಟ್ರಧ್ವಜ ಅನಾವರಣ ಮಾಡುವಾಗ ಅದೆಷ್ಟೂ ಎಚ್ಚರ ಎಂಬುದನ್ನು ಗಮನಿಸಿ. ರಾಷ್ಟ್ರೀಯ ಧ್ವಜವು ಬಟ್ಟೆಯ ತುಂಡಲ್ಲ, ಅದು ದೇಶದ ಪ್ರತಿನಿಧಿ; ಪರಮಾತ್ಮನ ಭಾವಚಿತ್ರ, ಮೂರ್ತಿಗಳೂ ಅಷ್ಟೆ. ಅವು ಕಲ್ಲು, ಕಾಗದ ಅಲ್ಲ, ಅದು ಪ್ರತ್ಯಕ್ಷ ದೈವ ಎಂಬುದೇ ಭಾವ. ತಾಯಿ ಕೇವಲ ಮಾಂಸ ಮುದ್ದೆಯಲ್ಲ, ತಂದೆ ಇನ್ನೊಬ್ಬ ಸಾಧಾರಣ ಗೆಳೆಯನಲ್ಲ, ಗುರುವು ಕೇವಲ ಪಂಡಿತನಲ್ಲ; ರಾಜನೂ ಅದೇ ಉನ್ನತ ಮಾಪನದವನು; ತಲೆತಲಾಂತರಗಳಿಂದ ನಾವು ಹೀಗೆಯೇ ಭಾವಿಸಿ, ಆಚರಿಸಿಕೊಂಡು ಬಂದಿದ್ದೇವೆ, ರಾಜಾ ಪ್ರತ್ಯಕ್ಷ ದೇವತಾಃ □ ಎನ್ನುವ ಭಾವನೆ ಗೌರವ ಸಮರ್ಪಣೆಗಳು ಅದರ ಮೂಲಕ ಸಲ್ಲುತ್ತಿದೆ. ದೇವರಲ್ಲೂ ಮನೆದೇವರು ಎಂದರೆ ಅದೂ ಭಕ್ತಿ ವಿಶೇಷವೇ!

ಅಯೋಧ್ಯೆ ಶ್ರೀರಾಮನ ಜನ್ಮಸ್ಥಾನ; ಶ್ರೀರಾಮನು ಮನುಷ್ಯರೂಪೀದೈವ; ಪ್ರಜೆಗಳ ಅಂತರಂಗ ಗೆದ್ದವನು; ಆತನ ನಾಮಸ್ಮರಣೆ ಪಾಪಗಳ ತಾರಕ, ರಾಮ ನಮ್ಮೆಲ್ಲರ ಹಿರಿಯಣ್ಣ, ಆತ ಆದರ್ಶ, ಆತ ಅಯೋಧ್ಯೆಯಲ್ಲೇ, ನಾವು ಗುರುತಿಸಿ ಪೂಜಿಸುತ್ತಿರುವ ಸ್ಥಳದಲ್ಲೇ ಹುಟ್ಟಿದ್ದ; ನಮ್ಮ ರಾಷ್ಟ್ರಜೀವನಕ್ಕೆ ಮೆರಗು ನೀಡಿದಾತ; ಮಾನವ ಜೀವನದ ಧನ್ಯತೆಭಕ್ತಿಗಳ ಉದ್ಗಾತ; ಆತ ಪ್ರತಿದೈವ; ವಿದ್ವತ್ತು ಕರ್ಮಠತೆಗಳ ಪ್ರತಿರೂಪ, ಆತ ರಾಷ್ಟ್ರಸೇವಕ, ಆತ ಮೇಲ್ಪಂಕ್ತಿ, ಆತ ರಣಧೀರ. ಹತ್ತು ಹಲವು ರೀತಿಯ ನೂರು ಸಾವಿರ ಆಂತರಿಕ ಭಾವಭಾವನೆಗಳ ಪಡಿಯಚ್ಚು ಆತ. ಪೀಳಿಗೆಯಿಂದ ಪೀಳಿಗೆಗೆ ಈ ಭಕ್ತಿ – ದೈವಭಕ್ತಿ, ಧರ್ಮಭಕ್ತಿ, ರಾಷ್ಟ್ರಭಕ್ತಿ, ಅನೂಚಾನವಾಗಿ ಹರಿದು ಬಂದು, ಶ್ರೀರಾಮನು ನಮ್ಮ ರಾಷ್ಟ್ರವೀರನಾಗಿ, ರಾಷ್ಟ್ರೀಯತೆಯ ಉದ್ಗಾರನಾಗಿ, ಮೇಲ್ಮಟ್ಟದ ಪ್ರತೀಕವಾಗಿ ಮೂಡಿಬಂದಿದ್ದಾನೆ. ಆ ಪ್ರತೀಕ ಉಧ್ವಸ್ಥವಾದಾಗ ಜನಾಂಗದ ಆಂತರಿಕ ಕೆಚ್ಚು ಕೆರಳಿದ್ದು ಅತಿ ಸ್ವಾಭಾವಿಕ. ಆಗಿನ ಪೌರುಷಮಯ, ತ್ಯಾಗಮಯ ಧರ್ಮಹೋರಾಟಕ್ಕೆ ಆತನೇ ಬೆಂಬಲ, ಒತ್ತಾಸೆ. ಆತನನ್ನು ಆದರ್ಶ ರಾಜ, ಆದರ್ಶಪತಿ, ಆದರ್ಶ ಸೇವಕ ಎಂದು ಕರೆಯುತ್ತಾ, ಪೂಜಿಸುತ್ತಾ, ಆತನ ಗುಣಸಂಪದಗಳನ್ನು ನಮ್ಮದನ್ನಾಗಿ ಮಾಡಿಕೊಳ್ಳುತ್ತಾ, ಭಾರತವು ವಿಶ್ವವಂದ್ಯವಾಗಿ ಎದ್ದುನಿಲ್ಲುವ ಕಸುವು ಪ್ರಾಪ್ತಿಗಾಗಿಯೇ ಹೋರಾಟ ನಡೆಯಿತು. ಸರ್ವಶಕ್ತಿ ಸಾಮರ್ಥ್ಯಗಳ, ಮಾನವೀಮೌಲ್ಯಗಳೆಲ್ಲದರ ಪ್ರತೀಕ ಶ್ರೀರಾಮನ ಆರಾಧನೆ ನಡೆಸುತ್ತಿರುವ ನಾವೇ ಧನ್ಯರು, ಎಂಬ ಹೆಮ್ಮೆಯೂ ನಮ್ಮದೇ. ಅದಕ್ಕಾಗಿಯೇ ಹೋರಾಟವೂ. ಭಾರತವು ಜಗದ್ವಂದ್ಯವಾಗಲೆಂದೇ, ಆತನ ದಿವ್ಯಸ್ಮೃತಿ ಪ್ರತ್ಯಕ್ಷ ಪುನರ್‌ಸ್ಥಾಪನೆಗೆಂದೇ ತಲೆತಲಾಂತರದ ನಮ್ಮ ಹಿರಿಯರು ಹೋರಾಡಿದರು. ಅನ್ಯಾಯದ ವಿರುದ್ಧ ಸಿಡಿದೆದ್ದರು; ಶತೃಗಳ ಮಗ್ಗಲುಮುರಿದರು. ಬಲಿದಾನ ಗೈದರು, ವಿಜಯದ ಬಾಸಿಂಗದ ಮಾಲೀಕರಾದರು; ಧರ್ಮ, ಸತ್ಯಗಳನ್ನು  ಪ್ರತಿಷ್ಠಾಪಿಸಲು, ಅಧರ್ಮ, ಅಸತ್ಯಗಳ ಮೂಲೋಚ್ಚಾಟನೆ ಗೈಯಲು ಜೀವನವನ್ನೇ ಸಮರ್ಪಿಸಿದರು ಎಂಬ ಪೂರ್ವೇತಿಹಾಸವು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ಹೋರಾಟ ಮತ್ತು ಗಳಿಸಿಕೊಂಡ ವಿಜಯಧ್ವಜ. ಇವುಗಳು ರಾಮನಿಗೇ ಮತ್ತೆ ಸಮರ್ಪಿತಗೊಳ್ಳಲು ಸಜ್ಜಾಗಿ ನಿಂತಿರುವುದು ರಾಮಭಕ್ತರೆಲ್ಲರಿಗೂ ಅತಿ ಸಂತೋಷದ ಸಂಗತಿ.

ಶ್ರೀರಾಮ ಬಂಧುಪ್ರೇಮಿ, ಭಕ್ತರಕ್ಷಕ ಅವನ ಸದ್ಗುಣಗಳೇ ನಮ್ಮ ಆಸ್ತಿ. ಆತ ಪುರುಷೋತ್ತಮ, ವೈರಿಗಳಿಗೆ ಯಮರಾಜ. ನಾವು ಅನುಕರಿಸುವುದು ಅವನನ್ನೇ, ಅವನ ಸದ್ಗುಣಗಳನ್ನೇ. ಅಯೋಧ್ಯೆಯ ರಾಮಮಂದಿರವು ರಾಷ್ಟ್ರೀಯ ಅಸ್ಮಿತೆಯ ಭದ್ರಕವಚ; ಸರ್ವತಂತ್ರಸ್ವತಂತ್ರ, ಮತಾಂಧವಿರೋಧಿ, ಸರ್ವಸಮಭಾವನಡತೆ ವ್ಯವಹಾರಗಳ ಪ್ರತಿರೂಪ, ಸಮರ್ಥ ರಾಷ್ಟ್ರ ಒರೆಗಲ್ಲು.

ರಾಮಮಂದಿರದ ಇಂದಿನ ಗೆಲುವು ಯಾವುದೇ ಪಕ್ಷ ಪಂಗಡದ್ದಲ್ಲ; ಯಾವುದೇ ಮತ ಸಂಪ್ರದಾಯ ಸಂಘಟನೆಯದಲ್ಲ. ಅದು ಇಡೀ ಜನತೆಯದು. ಅದು ರಾಷ್ಟ್ರೀಯ ವಿಜಯ, ಸಾಂಸ್ಕೃತಿಕ ವಿಜಯ, ಸತ್ಯದ ವಿಜಯ, ಧರ್ಮದ ವಿಜಯ, ಅದರಲ್ಲಿ ಕೂಡಿಬಂದಿರುವುದು ಸರ್ವಪಂಥ ಪ್ರೇಮಾದರ ಸರ್ವಪಂಥೀಯರ ಒಗ್ಗಟ್ಟಿನ ಜೀವನ. ಈ ಸದ್ಗುಣಗಳ ಸಮುಚ್ಚಯವೇ ರಾಷ್ಟ್ರೀಯತೆ. ಅಯೋಧ್ಯೆಯ ಮಂದಿರ ಕೇವಲ ಒಂದು ಪಂಥದ ದೇವಾಲಯವಲ್ಲ. ಅದು ರಾಷ್ಟ್ರೀಯ ದೇವಾಲಯ. ರಾಷ್ಟ್ರಹಿತವೇ ಅದರ ಮುಂಚೂಣಿಶಕ್ತಿ ಮತ್ತು ಭಾವನೆ. ದೇಶವಾಸಿಗಳೆಲ್ಲರೂ, ಸಹೋದರರು, ಸಹೋದರರೆಲ್ಲರ ಒಗ್ಗೂಡುವಿಕೆ, ಭಾವ ಮತ್ತು ಜೀವನ, ಎಲ್ಲರೂ ಭಕ್ತಿಯಿಂದ ವರ್ತಿಸುವುದೇ ಅವರ ಬೆಸುಗೆ. ರಾಷ್ಟ್ರಭಕ್ತಿ ಎಂದರೆ ಯಾವುದೇ ಗುಂಪಿನ, ಮತದ, ಜಾತಿಯ, ಪ್ರಾಂತದ, ಭಾಷೆಯ, ವಿದ್ವಾಂಸನ, ನಗರವಾಸಿಯ, ಹಳ್ಳಿಗನ ಏಳಿಗೆಯಲ್ಲ; ಬದಲಿಗೆ ಸರ್ವಸಮಾದರದ, ಭಾವಭಾವನೆಗಳ ಆಗರ. ರಾಮಮಂದಿರ ಅಂತಹ ರಾಷ್ಟ್ರಭಕ್ತಿಯ ಮಂದಿರ. ಭಾರತ ದೇಶದ, ಭಾರತ ಸಂಸ್ಕೃತಿಯ ಹೆಗ್ಗುರುತು. ಇಲ್ಲಿನ ಮಣ್ಣಿನ ಸುಪುತ್ರ, ದೇವದೇವಿಯರ ಕುರಿತಾಗಿ ಪರಮಶ್ರದ್ಧೆ. ದೇಶ, ನೆಲ, ಜಲ, ಸ್ವಸಂಸ್ಕೃತಿ, ಜೀವನ ಮೌಲ್ಯಗಳು, ಸ್ವಚ್ಛ ಆಡಳಿತ, ರಕ್ಷಣೆ, ಧವಳ ರಾಷ್ಟ್ರೀಯ, ವೈಯಕ್ತಿಕ ಚಾರಿತ್ರ್ಯ ಹೆಮ್ಮೆಯ ಇತಿಹಾಸ. ಪೂರ್ವಜರು, ಭವಿಷ್ಯದ ನಿರೀಕ್ಷೆ, ಸಂತಪರಂಪರೆಗಳ ಕುರಿತಾಗಿ ಏರು ಅಭಿಮಾನ, ಆಸ್ಥೆ, ಬದ್ಧತೆ, ಆತ್ಮೀಯತೆಗಳದೇ ಮಹಾಪೂರ. ಒಂದರ್ಥದಲ್ಲಿ ಅದೇ ಹಿಂದು ದೇಶದ ರಾಷ್ಟ್ರೀಯತೆ. ಅದೇ ರಾಷ್ಟ್ರದ ವಿಶ್ವಾತ್ಮ.

ಪ್ರಸ್ತುತ ಭಾರತವು ಹಲವಾರು ಪೀಡೆಗಳಿಂದ ನಲುಗಿದೆ. ಭಯೋತ್ಪಾದನೆ, ಮತಾಂತರ, ಹೊಟ್ಟೆಹಸಿವು, ಅಜ್ಞಾನಗಳ ನಗ್ನ ನೃತ್ಯ ನಡೆದಿದೆ; ಹೀಗಾಗಿ ರಾಜಕೀಯ ವೈಷಮ್ಯಗಳು ತಾಂಡವವಾಡುತ್ತಿವೆ. ಜನತೆಯ ಆಂತರಿಕಶಕ್ತಿಯನ್ನು ಕುಗ್ಗಿಸುವ ರೀತಿಯಲ್ಲಿ ನಮ್ಮ ದೇಶದ ಜನಸಾಗರದ ಸದ್ಗುಣಗಳು ತಲೆಮರಿಸಿಕೊಂಡು ಕಣ್ಮರೆಯಾಗಿದೆ. ಕೃಣ್ವಂತೋ ವಿಶ್ವಮಾರ್ಯಂ ಎಂಬ ಘನತತ್ತ್ವ ದ ಮರೆವೇ ಆಗಿದೆ. ಹೀಗೆ ರಾಷ್ಟ್ರದ ಅಂತರಾತ್ಮವೇ ಘಾಸಿಕೊಂಡಿದೆ. ಭಾರತೀಯರು ಈ ಅಪವ್ಯಸನಗಳನ್ನೆಲ್ಲ ದಾಟಿಕೊಂಡು ಜಗತ್ತಿನೆದುರು

ಪುಟ 10 ಕ್ಕೆ ➢

ನಿಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವವರು ನೀವೇ. – ಸ್ವಾಮಿ ವಿವೇಕಾನಂದ

➤ ಪುಟ 9 ರಿಂದ.....

ತಲೆಎತ್ತಿ ನಿಲ್ಲಬೇಕಾಗಿದೆ. ಧ್ಯೇಯಪಥದಲ್ಲಿ ಅಡಿಗರಾಗಿ ನಾವು ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆ. ಇವನನ್ನು ಅತ್ತ ಬಿಸಾಡಿ, ಅವನ ಸುಧಾರಣೆ ಸಾಧ್ಯವಿಲ್ಲ. ಹೊಡಿ, ಬಡಿ ಎಂಬ ಆವೇಶದಲ್ಲಿ ನಮ್ಮ ವಿಶ್ವಸೋದರತೆಯನ್ನು, ಸುಧಾರಕ ಪರಿಷ್ಕೃತಿ ಸಾಮರ್ಥ್ಯವನ್ನು ನಾವು ಕೈಬಿಟ್ಟಿದ್ದೇವೆ. ಆಂಜನೇಯನಂತೆ, ನಮ್ಮ ಆಂತರಿಕ ಶಕ್ತಿಯ ಅರಿವೇ ಇಲ್ಲವಾದಂತೆ ಭಾಸವಾಗುತ್ತಿದೆ. ನಮ್ಮ ಮನಬುದ್ಧಿಗಳಿಗೆ ಪ್ರಬಲ ಕಗ್ಗಂಟು ಸುತ್ತಿಕೊಂಡಿದೆ. ನಾವು ಈ ಎಲ್ಲ ಪುಟಗಳಿಂದ ದೂರಗೊಂಡು ಹೊರಬರಬೇಕಾಗಿದೆ; ಪರಸ್ಪರ ಸಮರಸತೆ, ಪ್ರೀತಿ, ಹೆಗಲಿಗೆ ಹೆಗಲು ಮುಂತಾದ ಹುಟ್ಟುಗುಣಗಳ ನೆನಪು ನಮಗಾಗಬೇಕು. ಆಂಜನೇಯನು ಸ್ವಶಕ್ತಿಯ ಆಧಾರದ ಮೇಲೆಯೇ ಸಮುದ್ರ ಹಾರಿ ರಾಮಸೇವೆ ಕೈಗೊಂಡಂತೆಯೇ ನಮ್ಮ ಪ್ರಗತಿಗೆ ಅಡ್ಡಲಾಗಿರುವ ಅಡ್ಡಿಆತಂಕಗಳ ಮಹಾಸಮುದ್ರವನ್ನು ದಾಟಬಲ್ಲೆವೇನು? ಹೌದು, ಅದು ನಮ್ಮಿಂದ ಸಾಧ್ಯ. ನಮ್ಮದು ವಿಶ್ವಾಸಭರಿತ ಬಾಳು.

ಬನ್ನಿ, ಅಯೋಧ್ಯೆಯ ರಾಮನಿಗೆ ಶರಣಾಗೋಣ. ಆತನ ದಿವ್ಯ ಪ್ರತಿಭೆಯನ್ನು ನೆನೆಯೋಣ. ನಮ್ಮನ್ನು ಕಾಪಾಡು ಎಂದು ವಿನಂತಿಸೋಣ. ನಾನಲ್ಲ, ನಾವು ಎಂಬ ಭಾವ, ಕೃತಿಯತ್ತ ಮುನ್ನುಗ್ಗಿ ಭವ್ಯಭಾರತದ ಶುಭನಾಂದಿಗೆ ಮನ ನೀಡೋಣ. ಹೇಡಿ ಭಾವನೆ ಸರ್ವಥಾ ಸಲ್ಲ. ನಾವು ಔನ್ನತ್ಯದ ದಾರಿಯತ್ತಲೇ ಹೆಜ್ಜೆ ಇಡುತ್ತಿದ್ದೇವೆಂಬ ವಿಶ್ವಾಸ ಹುಟ್ಟಿಬರಲಿ. ನಮ್ಮ ಹಿರಿಯರ ಕನಸು, ಆಸೆ, ಆಕಾಂಕ್ಷೆಗಳನ್ನು ಪೂರೈಸುವತ್ತ ದಾಪುಗಾಲು ಹಾಕೋಣ. ಶ್ರೀರಾಮನೆಂಬ ಭವ್ಯವ್ಯಕ್ತಿತ್ವ, ಶ್ರೀರಾಮಲಲ್ಲಾ ಎಂಬ ಮೂರ್ತಿ, ಈ ಎಲ್ಲವೂ ಒಟ್ಟುಗೂಡಿ ಬಂದು, ದಿವ್ಯ ಪ್ರಭೆಯು ಸಾಕ್ಷಾತ್ಕಾರಗೊಳ್ಳಲಿ. ನಮ್ಮೆಲ್ಲ ಅಶಿಸ್ತು, ಜಡತೆಗಳಿಗೆ ವಿದಾಯ ಹೇಳೋಣ. ರಾಷ್ಟ್ರಪುರುಷ ಶ್ರೀರಾಮನ ಅಯೋಧ್ಯೆಯಲ್ಲಿನ ದೇವಮಂದಿರವು ರಾಷ್ಟ್ರಮಂದಿರ ಎಂಬ ಹೆಗ್ಗಳಿಕೆ ಗಳಿಸಲಿ; ಒಂದು ನೂರು ಮೂವತ್ತು ಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯ ನಮ್ಮ ನಾಡು ಜಗದ್ವಂದ್ಯ ಭಾರತವಾಗಿ ಕಂಗೊಳಿಸುವಂತೆ ಮೇಲೇಳಲಿ; ಶ್ರೀರಾಮನ ದಿವ್ಯದರ್ಶನವು ಪ್ರಪಂಚಕ್ಕೆ ಬೆಳಕು ನೀಡುವುದನ್ನು ಪ್ರತೀಕ್ಷಿಸೋಣ. ಅನ್ನ, ಬಟ್ಟೆ ಪೂರೈಕೆಗೆಂದೇ ದಿನನಿತ್ಯ ಹೋರಾಟ ಎಂಬ ಕೃತಕ, ಅರ್ಥವಿಹೀನ ಜೀವನವು ದೂರಸರಿದು ಪುರುಷಾರ್ಥ, ಮಹತ್ಕೃತಿಗಳ ಗಳಿಕೆಯತ್ತ ಮನ ನೀಡಲಿ. ರಾಮಪ್ರಣೀತ ರಾಷ್ಟ್ರಜೀವನವು ವಿಶ್ವಗುರುಸ್ಥಾನದಲ್ಲಿ ರಾರಾಜಿಸಲಿ.

ಮಹತ್‌ವೈಭವದ ಮುಹೂರ್ತವೇ ರಾಷ್ಟ್ರ ಏಳಿಗೆಯ ಸುಮುಹೂರ್ತ. ನಾವು ಅಂತಿಮವಾಗಿ ಗಳಿಸಲು ಹೊರಟಿರುವುದೇ ರಾಷ್ಟ್ರದ ಸರ್ವಾಂಗೀಣ ಏಳಿಗೆ. ಸರ್ವಾಂಗೀಣ ಏಳಿಗೆಯ ಸಾಕಾರಕ್ಕಾಗಿ, ಜನತೆಯ ದಿವ್ಯಪ್ರತಿಜ್ಞೆ, ಸಂವಿಧಾನಬದ್ಧ, ರಾಷ್ಟ್ರಭಕ್ತ, ಸಂಸ್ಕೃತ/ಸಂಸ್ಕೃತಿ. ಪ್ರೇಮಿನಾಯಕತ್ವದ ಮಹಾನ್‌ಪ್ರೇರಣೆಗಳು, ಅದರ ಮೂಲಶಕ್ತಿ. ಅದು ಎಚ್ಚೆತ್ತ ಭಾರತದ ಹೊಳಹು. ಇದೇ ನವನಿರ್ಮಿತ ಸಮರ್ಥ ಭಾರತದ ಸಂಕಲ್ಪ. 2020ರಿಂದ ಆರಂಭಗೊಳ್ಳುವ ವರ್ಷವು ಮುಂದಿನ ಶತಮಾನಗಳ, ಸಹಸ್ರಮಾನಗಳ ಸಮರ್ಥ, ಸಶಕ್ತ, ಚಾರಿತ್ರ್ಯವಂತ ಪ್ರಜೆ, ಆಡಳಿತಗಾರ, ವಿದ್ವಾಂಸ, ರೈತ, ಕಾರ್ಮಿಕ, ಉದ್ಯೋಗಪತಿಗಳ – ಈ ಎಲ್ಲರೂ ರಾಷ್ಟ್ರ ನಿರ್ಮಾತರೇ–ನವನಿರ್ಮಿತಿಗೆ ಮೂಲ ಪ್ರೇರಣೆಯಾಗಲಿ ಎಂಬುದೇ ಆಶಯ, ನಿರೀಕ್ಷೆ ಮತ್ತು ಪರಮವಿಶ್ವಾಸ. ನೆನಪಿಡೋಣ. ಅಯೋಧ್ಯೆಯ ವಿಜಯಧ್ವನಿಯು ಜಗತ್ತಿನಲ್ಲೆಲ್ಲಾ ಮೊಳಗಲು ಆರಂಭಿಸಿದ ಮೇಲೆ ಅದಕ್ಕೇ ಸರ್ವ ಆದ್ಯತೆಗಳು. ಯಾವನೇ ವ್ಯಕ್ತಿಗೆ, ಯಾವುದೇ ಗುಂಪಿಗೆ, ಯಾವುದೇ ಸಮುದಾಯಕ್ಕೆ, ಯಾವುದೇ ಸಂಘಟನೆ, ರಾಜಕೀಯ ಪಕ್ಷಕ್ಕೆ ಮತ್ತೆ ಒಡಕಲು ಸ್ವರ ಎತ್ತುವ ಹಕ್ಕಿಲ್ಲ. ಇನ್ನು ಮುಂದೆ ನಾವೆಲ್ಲರೂ ಒಂದೇ. ನಾವು ಒಂಟಿ ಅಲ್ಲ, ಜತೆಗಾರರು, ಜತೆಗಾರತೆಯಲ್ಲೇ ರಾಷ್ಟ್ರದ ಹಿತ. ರಾಷ್ಟ್ರವೈಭವ.

**ಕೃಪೆ : ಕಾ. ಶ್ರೀ. ನಾಗರಾಜ, ಲೇಖಕರು**

➤ ಪುಟ 3 ರಿಂದ.....

75ನೇ ಸ್ವಾಂತಂತ್ರ್ಯ ಸಂಭ್ರಮ ಆಚರಿಸುವ ಸಂದರ್ಭದಲ್ಲಿ ರಾಷ್ಟ್ರದ 'ಶಕ್ತಿ ಕೇಂದ್ರ, ಆತ್ಮನಿರ್ಭರ, ಆತ್ಮಾಭಿಮಾನದ ಸಂಸತ್ ಭವನ ಜನಸೇವೆಗೆ ಅರ್ಪಿತವಾಗಲಿದೆ. ಅಹಮದ್‌ಬಾದ್‌ನ ಎಚ್.ಸಿ.ಪಿ ಡಿಸೈನ್ ಪ್ರೈವೇಟ್ ಲಿಮಿಟೆಡ್ ನೂತನ ಸಂಸತ್ ಭವನದ ವಿನ್ಯಾಸವನ್ನು ತಯಾರುಮಾಡಿದೆ. ಹೊಸ ಸಂಸತ್ ಭವನದ ಒಟ್ಟು ವಿಸ್ತೀರ್ಣ 64,500 ಚದುರ ಮೀಟರ್ ಒಟ್ಟು ನಾಲ್ಕು ಅಂತಸ್ತುಗಳು. ಲೋಕಸಭೆಯ ಆಸನಗಳ ಸಂಖ್ಯೆ 888. ರಾಜ್ಯಸಭೆಯ ಆಸನಗಳ ಸಂಖ್ಯೆ 384. ಒಟ್ಟು 1,224 ಸಂಸದರು ಲೋಕಸಭೆಯ ಜಂಟಿ ಅಧಿವೇಶನದಲ್ಲಿ ಭಾಗವಹಿಸಬಹುದಾಗಿದೆ. ಇದಕ್ಕೆ ತಗುಲುವ ನಿರ್ಮಾಣದ ವೆಚ್ಚ 971 ಕೋಟಿಯಷ್ಟು. ಒಟ್ಟು 13 ಎಕರೆ ವಿಸ್ತೀರ್ಣ ಜಾಗದಲ್ಲಿ ನಿರ್ಮಾಣ. ಈಗಿನ ಸಂಸತ್ ಭವನದ ಸಮೀಪವೇ ನೂತನ ಸಂಸತ್ ಭವನದ ನಿರ್ಮಾಣ ಮಾಡಲಾಗುತ್ತಿದೆ. ಈ ಎರಡು ಕಟ್ಟಡಗಳ ಎತ್ತರ ಸಮವಾಗಿರುತ್ತದೆ ಆದರೆ ವಿಸ್ತಾರದಲ್ಲಿ ಹೊಸ ಸಂಸತ್ ದೊಡ್ಡದಾಗಿದೆ. ಈಗಿನ ಸಂಸತ್ ವೃತ್ತಾಕಾರವಾಗಿದೆ. ಆದರೆ ಹೊಸ ಸಂಸತ್ ತ್ರಿಭುಜಾಕಾರಲ್ಲಿದೆ. ಹೊಸ ಸಂಸತ್ ಕಟ್ಟಡದ ಮಧ್ಯಭಾಗದಲ್ಲಿ ಗೋಪುರಗಳಂತಹ ಮೂರು ರಚನೆಗಳು ಇರಲಿವೆ. ಇದು ಸಂಪೂರ್ಣವಾಗಿ ಅತ್ಯಾಧುನಿಕ ಸವಲತ್ತುಗಳನ್ನು ಹೊಂದಿರುತ್ತದೆ. ಹೊಸ ಸಂಸತ್ ಶೇಕಡಾ 100 ರಷ್ಟು 'ಕಾಗದರಹಿತ' ಕಟ್ಟಡವಾಗಲಿದೆ. ಸಂಸತ್ ಕಲಾಪಗಳನ್ನು ಡಿಜಿಟಲ್ ರೂಪದಲ್ಲಿ ಹಾಗೂ ದಾಖಲೆ ಪತ್ರಗಳನ್ನು ವಿದ್ಯುನ್ಮಾನ ರೂಪದಲ್ಲಿ ನಿರ್ವಹಣೆ ಮಾಡಲಾಗುತ್ತದೆ. ಇದು ಭವಿಷ್ಯದ ಡಿಜಿಟಲ್ ಭಾರತದ ಸಾಕ್ಷಾತ್ಕಾರದ ಅನುರೂಪದಂತಿದೆ. ಮುಂದಿನ ದಿನಗಳಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡನೆ ಮತ್ತು ರಾಜ್ಯಸಭಾ ಸ್ಥಾನ ಸಂಖ್ಯೆಯ ಹೆಚ್ಚಳವಾದರೆ ಪ್ರಸ್ತುತ ಸಂಸತ್‌ನಲ್ಲಿ ಆಸನ ವ್ಯವಸ್ಥೆ ಕಷ್ಟಸಾಧ್ಯ ಎಂಬುದು ನೂತನ ಸಂಸತ್ ನಿರ್ಮಾಣದ ಹಿಂದಿನ ಉದ್ದೇಶಗಳಲ್ಲಿ ಒಂದು.

ಹೊಸ ಸಂಸತ್ ಭಾರತ ಪ್ರಜಾಪ್ರಭುತ್ವದ ಹೊಸ ಮಂಟಪವಾಗಿ ಹೊರಹೊಮ್ಮಲಿದ್ದು ರಾಷ್ಟ್ರ ಕಂಡ ಶ್ರೇಷ್ಠಸಂತ ಸಮಾಜ ಸುಧಾರಕ, ಮಹಾನ್ ಮಾನವತಾವಾದಿ ಹಾಗೂ 12ನೇ ಶತಮಾನದ ದಾರ್ಶನಿಕ ಬಸವಣ್ಣನವರ 'ಮಹಾಮನೆ' ಅನುಭವ ಮಂಟಪದಂತೆ ರಾಷ್ಟ್ರದಲ್ಲಿ ಕ್ರಾಂತಿಯನ್ನುಂಟುಮಾಡಿ ಸರ್ವರ ಪುರೋಭಿವೃದ್ಧಿಗೆ ಮೇಲ್ಪಂಕ್ತಿ ಹಾಕಬೇಕೆಂಬುದು ಪ್ರಧಾನಿ ಮೋದಿಯವರ ಆಶಯ ಎಂಬುದು ಅವರ ಭಾಷಣದಿಂದ ವೇದ್ಯವಾಗಿದೆ. 2022ರ ಆಗಸ್ಟ್ ವೇಳೆಗೆ ಹೊಸ ಸಂಸತ್ ಲೋಕಾರ್ಪಣೆ ಮಾಡುವ ಯೋಜನೆ ಹಾಕಿಕೊಳ್ಳಲಾಗಿದೆ.

ಹೊಸ ಸಂಸತ್ ಸ್ವಾತಂತ್ರ್ಯ ಭಾರತದ ಸಾರ್ವಭೌಮತ್ವ, ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಆತ್ಮನಿರ್ಭರತೆ, ಸ್ವದೇಶಿ, ಸ್ವಾವಲಂಬಿ, ಸದೃಢ, ಸ್ವಚ್ಛ, ಭ್ರಷ್ಟಾಚಾರ ಮುಕ್ತ, ಪಾರದರ್ಶಕ ಆಡಳಿತದ ದ್ಯೋತಕವಾಗಿ 'ಜನಸೇವೆಯೇ ಈಶಸೇವೆ', ಜನ ಸೇವೆಯೇ ಜನಾರ್ಧನ ಸೇವೆ' ಎಂಬುದರ ಆಶಯದಂತೆ ಜಗದ್ಗುರು ಭಾರತದ ಕನಸನ್ನು ಸಾಕಾರಗೊಳಿಸುತ್ತದೆ. ●



**ಕನಸಿನ ಗೋಪುರ ಒಡೆಯದಿರಲಿ,**
**ಮನಸ್ಸಿನ ಮಂದಿರ ಬೀಳದಿರಲಿ**
**ಆದರೆ ನಿಮ್ಮ ಬದುಕು ಯಾವಾಗಲೂ**
**ಕನ್ನಡಿಗರ, ಕನ್ನಡದ ಸೇವೆಯಲ್ಲಿರಲಿ.**

# ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಮಹಾಭಿಯಾನ, ನಿಧಿ ಸಮರ್ಪಣೆ



## ಸರ್ಕಾರಗಳ ನೆರವಿಲ್ಲದೆ ರಾಮ ಮಂದಿರ ನಿರ್ಮಾಣ

### ಕೂಡಿಟ್ಟ 600 ರೂ. ದೇಣಿಗೆ ನೀಡಿದ ಕಠಾರೆ ಸಹೋದರಿಯರು

### ನಿಧಿ ಸಮರ್ಪಣಾ ಅಭಿಯಾನ; ಬೃಹತ್ ಶೋಭಾಯಾತ್ರೆ

ಉದಯವಾಣಿ Mon, 18 January 2021



## ಮಂದಿರ ನಿರ್ಮಾಣ ಹಿಂದುಗಳ ಅಜೆಂಡಾ

### ವಿಶ್ವ ಹಿಂದು ಪರಿಷತ್ ಕೇಂದ್ರೀಯ ಮಹಾಮಂತ್ರಿ ಮಿಲಿಂದ ಪರಾಂಡೆ ಅಭಿಮತ

### ಮಕ್ಕಳು ಕೂಡಿಟ್ಟ ಹಣ ಮಂದಿರಕ್ಕೆ

### 430ಕ್ಕೂ ಹೆಚ್ಚು ಬೂತ್‌ಗಳಲ್ಲಿ ಅಭಿಯಾನ

### ಬಿಜೆಪಿ ನೇತೃತ್ವದಲ್ಲಿ ಬೃಹತ್ ಶೋಭಾಯಾತ್ರೆ

### ಅಂಚಟಗೇರಿಯಲ್ಲಿ ಸಂಕೀರ್ತನ












ವಿವಿಧೆಡೆಗಳಲ್ಲಿ ಶ್ರೀರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನ

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-01-2021 Date of Posting 20th or 21st of every month Posted at Periodical Rate

# ಶಿಕ್ಷಣ ಸಚಿವರಿಂದ ಸಭೆ





ಪದವಿ ಪೂರ್ವ ಶಿಕ್ಷಣ ಇಲಾಖೆ 2020–21 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ತರಗತಿಗಳನ್ನು ಪ್ರಾರಂಭ ಮಾಡುವ ಕುರಿತು ಸಭೆಯನ್ನು ಮಾನ್ಯ ಶ್ರೀ ಎಸ್. ಸುರೇಶಕುಮಾರ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ನಡೆಸಿದರು.

ಎಲ್ಲರಿಂದ ಬಹಳ ಉತ್ಸಾಹದಾಯಕ ಪ್ರತಿಕ್ರಿಯೆ ಕೇಳಿಬಂತು. ಜೊತೆಗೆ ಮೊದಲನೇ ಪಿಯುಸಿ ತರಗತಿಗಳನ್ನು ಎಲ್ಲಾ ಕ್ರಮಗಳನ್ನು ಅನುಸರಿಸಿ ಪ್ರಾರಂಭಿಸುವ ಅಗತ್ಯತೆ ಕುರಿತು ಆಗ್ರಹ ಕೇಳಿಬಂದಿದೆ. ಈ ಬಗ್ಗೆ ರಾಜ್ಯದ ತಜ್ಞರ ಸಮಿತಿ ಸಲಹೆ ಕೇಳಿ ಮುಂದಿನ ಹೆಜ್ಜೆ ಇಡುವುದಾಗಿ ತಿಳಿಸಲಾಯಿತು.

ಸಭೆಯಲ್ಲಿ ಶ್ರೀ ಉಮಾಶಂಕರ IAS, ಪ್ರಧಾನ ಕಾರ್ಯದರ್ಶಿ ಶಿಕ್ಷಣ ಇಲಾಖೆ. ಶ್ರೀಮತಿ ಸ್ನೇಹಲ್ ಆರ್. IAS, ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ರಾಜ್ಯದ ವಿವಿಧ ಶಿಕ್ಷಕ ಸಂಘಟನೆಗಳ ಅಧ್ಯಕ್ಷರು ಭಾಗವಹಿಸಿದ್ದರು.

ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಿಂದ ಅಧ್ಯಕ್ಷರಾದ ಸಂದೀಪ್ ಬೂದಿಹಾಳ್ ರವರು ಮತ್ತು ಸಹ ಕಾರ್ಯದರ್ಶಿಗಳಾದ ಗಂಗಾಧರಾಚಾರ್ಯರು ಭಾಗವಹಿಸಿದ್ದರು.

# ಮೈಸೂರು : ಕರ್ತವ್ಯ ಬೋಧ ದಿವಸ





ದಿನಾಂಕ 12.01.2021ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಮೈಸೂರು ಜಿಲ್ಲೆಯವರು ಕರ್ತವ್ಯ ಬೋಧ ದಿವಸವನ್ನು ಆಚರಿಸಿದರು. ಕಾರ್ಯಕ್ರಮದಲ್ಲಿ ಎ.ಬಿ.ಆರ್.ಎಸ್.ಎಮ್ ನ ಮಹಾಮಂತ್ರಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು ಭಾಗವಹಿಸಿ ಸಭಿಕರಿಗೆ ಕರ್ತವ್ಯ ದಿನದ ಬಗ್ಗೆ ಸವಿವರವಾಗಿ ತಿಳಿಸಿದರು. ಶ್ರೀಯುತ ನಾಗಮಲ್ಲೇಶ್, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆಯುವರು ಭಾಗವಹಿಸಿ ಗುರು–ಶಿಷ್ಯ ಪರಂಪರೆಯ ಬಗ್ಗೆ ಸವಿವರವಾಗಿ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಕೆ.ಎನ್. ಜಯದೇವರಾಜ ಅರಸ್, ಜಿಲ್ಲಾ ಅಧ್ಯಕ್ಷರು, ಮೈಸೂರು ಜಿಲ್ಲೆ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಕ.ರಾ.ಮಾ.ಶಿ.ಸಂಘ, ಮೈಸೂರು ಜಿಲ್ಲೆಯ ಕೆ.ಆರ್ ಉದಯರವಿಪ್ರಕಾಶ್, ಜಿಲ್ಲಾ ಪ್ರಧಾನಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಒಟ್ಟು 50 ಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ. ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com